ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 18-19
ರೂ. 2.00

7 ಮೇ 1995



ಮುಂದೊತ್ತಿ ಸಾಗಲಿ ದುಡಿಯುವ ಜನಗಳ ಹೋರಾಟಗಳು

ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಹಾಗೂ ದೇಶ ಪ್ರೇಮಿ ಶಕ್ತಿಗಳನ್ನು ಅಣಿನೆರೆಸಿ ದೇಶದ ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತೆಯನ್ನು ರಕ್ಷಿಸಲು, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಉಳಿಸಲು ಸತತ ಹೋರಾಟ ನಡೆಸಬೇಕು ಎಂದು ಕಾರ್ಮಿಕ ವರ್ಗಕ್ಕೆ ಹಾಗೂ ಸಾಮಾಜಿಕ ಸಂಘಟನೆಗಳಿಗೆ ಅಂತರ್ರಾಷ್ಟ್ರೀಯ ಕಾರ್ಮಿಕ ಸೌಹಾರ್ದಾತೆಯ ದಿನವಾದ ಮೇ ದಿನದ ಸಂದರ್ಭದಲ್ಲಿ ಸಿ.ಐ.ಟಿ.ಯು. ಕರೆನೀಡಿದೆ.

ಜನಸಾಮಾನ್ಯರನ್ನು ಹಿಂಡಿ ಖಾಸಗಿ ಗುತ್ತೇದಾರಿಗಳು, ಬಹುರಾಷ್ಟ್ರೀಯ ಕಂಪನಿಯ ಸುಲಿಗೆಗಾರರು ಲಾಭಸೂರೆಗೊಳ್ಳುತ್ತಿದ್ದರೆ, ಇತ್ತ ದೇಶದ ಆರ್ಥಿಕ ವಿನಾಶದತ್ತ ಸಾಗಿರುವ ಸಂದರ್ಭದಲ್ಲಿ ಈ ವರ್ಷದ ಮೇ ದಿನ ಬಂದಿದೆ. ವಿದೇಶಿಸಾಲ 92 ಶತಕೋಟಿ ಡಾಲರುಗಳಿಗೇರಿದೆ. ಸಾಲದ ಮರುಪಾವತಿ ಮತ್ತು ಬಡ್ಡಿಗೆಂದೇ 30%. ಮೀಸಲಿಡಬೇಕಾದ ಸ್ಥಿತಿ. ಆಂತರಿಕ ಸಾಲ ಇದರ ಎರಡು ಪಟ್ಟು. ಈ ಸಾಲಗಳ ಮರುಪಾವತಿ, ಬಡ್ಡಿಗೆಂದೇ ಒಟ್ಟು ರೆವಿನ್ಯೂ ಆದಾಯದ 121.5% ಹೋಗುವಂತಹ ಪರಿಸ್ಥಿತಿ ಬಂದಿದೆ. ರಫ್ತು 17.2%. ಮಾತ್ರ ಹೆಚ್ಚಿದರೆ, ಆಮದು 23.5% ಹೆಚ್ಚಿದೆ. ವ್ಯಾಪಾರ ಬಾಕಿ 181 ಕೋಟಿ ರೂ.ಗಳ ದಾಖಲೆ ಮಟ್ಟ ತಲುಪಿದೆ.

ಈ ಹಿನ್ನೆಲೆಯಲ್ಲಿ ಇಂತಹ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಸಿ ಐ ಟಿ ಯು ಮೇ ದಿನದ ಪ್ರಣಾಳಿಕೆ ಕಾರ್ಮಿಕ ವರ್ಗಕ್ಕೆ, ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಗೆ ಕರೆ ನೀಡಿದೆ. ಏಕೆಂದರೆ ಒಂದು ಬೃಹತ್ ಹೋರಾಟದಿಂದ ಮಾತ್ರವೇ ಸರ್ಕಾರ ಈ ವಿನಾಶಕಾರಿ ದಾರಿಯನ್ನು ಬಿಡುವಂತೆ ಮಾಡಲು ಸಾಧ್ಯ ಎಂದು ಅದು ಅಭಿಪ್ರಾಯಪಟ್ಟಿದೆ.

ಜನ ಸಮೂಹಗಳ ಐಕ್ಯತೆ ಅತೀ ಅಗತ್ಯವಾದ ಈಗಿನ ದಿನಗಳಲ್ಲಿ ಕೋಮುವಾದಿ, ಪ್ರತ್ಯೇಕತಾವಾದಿ, ವಿಚ್ಛಿದ್ರಕಾರಿ ಶಕ್ತಿಗಳು ಬೆಳೆದಿರುವ ಬಗ್ಗೆ ಆತಂಕ ಪಟ್ಟಿರುವ ಸಿ ಐ ಟಿ ಯು ಪ್ರಣಾಳಿಕೆ ಅಯೋಧ್ಯಾ ಧ್ವಂಸಾಚಾರವನ್ನು ಕಾಶಿ, ಮಥುರಗಳಿಗೂ ವಿಸ್ತರಿಸುವ ಆರ್.ಎಸ್.ಎಸ್.-ಬಿ.ಜೆ.ಪಿ.-ವಿ.ಹೆಚ್.ಪಿ. ಕೂಟದ ಬೆದರಿಕೆ, ಉತ್ತರ ಮತ್ತು ಪಶ್ಚಿಮದಲ್ಲಿ ಶಿವಸೇನೆಯ ಜೊತೆಗೆ ಅದರ ಅಳ್ವಿಕೆ ವಿಸ್ತರಿಸಿರುವುದು ಹಾಗೂ ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿಗಳ ಉಗ್ರಗಾಮಿ ಚಟುವಟಿಕೆಗಳಿಂದಾಗಿ ದೇಶವನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿ ಆಟಕ್ಕೆ ಸಿಲುಕುವಂತಾಗುತ್ತಿದೆ ಎಂದಿದೆ.

ಸಿ.ಐ.ಟಿ.ಯು. ಮೇ ದಿನದ ಕರೆ.

ಶಿಕ್ಷಣದ ಖಾಸಗೀಕರಣದಿಂದ ವಿದ್ಯಾರ್ಥಿಗಳ ಭವಿಷ್ಯ ಹಾಗೂ "ಸಂರಚನಾತ್ಮಕ ಹೊಂದಾಣಿಕೆ" ಕಾರ್ಯಕ್ರಮದಿಂದ ಯುವಜನರ ಭವಿಷ್ಯ ಅಂಧಕಾರಮಯವಾಗುತ್ತಿರುವ ಸಂದರ್ಭದಲ್ಲಿ ಶಿಕ್ಷಣದ ಖಾಸಗೀಕರಣದ ವಿರುದ್ಧ ಹಾಗೂ ಸರ್ವರಿಗೂ ಉದ್ಯೋಗ ಬೇಕೆಂಬ ಅವರ ಬೇಡಿಕೆಗಳನ್ನು ಬೆಂಬಲಿಸಬೇಕು ಎಂದು ಕಾರ್ಮಿಕವರ್ಗಕ್ಕೆ ಸಿ.ಐ.ಟಿ.ಯು. ಮೇ ದಿನದ ಪ್ರಣಾಳಿಕೆ ಕರೆ ನೀಡಿದೆ.

ಭೂಸುಧಾರಣೆಯ ಅನುಷ್ಠಾನಕ್ಕಾಗಿ, ಕೃಷಿಕೂಲಿಕಾರರ ಸೌಲಭ್ಯಗಳಿಗೊಂದು ಕೇಂದ್ರೀಯ ಶಾಸನಕ್ಕಾಗಿ ಅವರೊಂದಿಗೆ ಒಂದು ಹೋರಾಟ ಶೀಲ ಸಂಬಂಧ ಬೆಸೆಯಬೇಕೆಂದೂ, ಉದ್ಯೋಗ ಹೀನತೆಗೆ ಹೆಚ್ಚೆಚ್ಚು ತುತ್ತಾಗುತ್ತಿರುವ ದುಡಿಯುವ ಮಹಿಳೆಯರ ನಿರ್ದಿಷ್ಟ ಸಮಸ್ಯೆಯನ್ನೆತ್ತಿಕೊಂಡು ಅವರನ್ನು ಸಾಮೂಹಿಕ ಕಾರ್ಮಿಕರ ಹೋರಾಟಗಳಲ್ಲಿ ಹೆಚ್ಚೆಚ್ಚು ಒಳಗೊಳ್ಳಬೇಕೆಂದೂ ಸಿ ಐ ಟಿ ಯು ಮೇ ದಿನದ ಸಂದರ್ಭದಲ್ಲಿ ಕರೆನೀಡಿದೆ.

ಶ್ರೀಮಂತ ದೇಶಗಳು ಮುಕ್ತ ವ್ಯಾಪಾರದ ಹೆಸರಲ್ಲಿ ಗ್ಯಾಟ್ (ಈಗ ವಿಶ್ವ ವ್ಯಾಪಾರ ಸಂಘಟನೆ) ಮೂಲಕ ತಮ್ಮ ತೀವ್ರ ಬಿಕ್ಕಟ್ಟಿನ ಹೊರೆಯನ್ನು ಮೂರನೇ ಜಗತ್ತಿನ ದೇಶಗಳ ಜನರ ತಲೆಯ ಮೇಲೆ ಹಾಕುವ ಹುನ್ನಾರ ನಡೆಸಿವೆ ಎಂಬುದನ್ನು ಕಾರ್ಮಿಕವರ್ಗ ಅರಿಯಬೇಕೆಂದಿರುವ ಮೇ ದಿನದ ಪ್ರಣಾಳಿಕೆ ಕಾರ್ಮಿಕವರ್ಗ ಮೆಕ್ಸಿಕೋ ಬಿಕ್ಕಟ್ಟಿನಿಂದ ಪಾಠ ಕಲಿಯಬೇಕು ಎಂದಿದೆ.

ಮೂರನೇ ಜಗತ್ತಿನ ದೇಶಗಳಲ್ಲಿ ಬಂಡವಾಳಶಾಹಿ-_ಭೂಮಾಲಕ ಶೋಷಣೆಗಳ ವಿರುದ್ಧ, ಜಾಗತೀಕರಣ ಹಾಗೂ ಉದಾರೀಕರಣದ ಹೆಸರಲ್ಲಿ ಹರಿಯಬಿಟ್ಟಿರುವ ಹೊಸ ಸಾಮ್ರಾಜ್ಯಶಾಹಿ ಧಾಳಿಗಳ ವಿರುದ್ಧ ಹೋರಾಟ ನಡೆಸುತ್ತಿರುವ ಕಾರ್ಮಿಕವರ್ಗದ ಮಿತ್ರರುಗಳಾದ ರೈತರು, ಕೃಷಿಕೂಲಿಕಾರರು ಹಾಗೂ ಇತರ ದುಡಿಯುವ ಜನಗಳಿಗೆ, ಹಿಂದಿನ ಸಮಾಜವಾದಿ ದೇಶಗಳಲ್ಲಿ ಬಂಡವಾಳಶಾಹಿ ದಾರಿಯಿಂದಾಗಿ ಎಲ್ಲಾ ಸೌಲಭ್ಯಗಳನ್ನು ಕಳಕೊಂಡು ಈಗ ಈ ವಂಚನೆಯ ವಿರುದ್ಧ ಹೋರಾಟ ಮಾಡುತ್ತಿರುವ ಕಾರ್ಮಿಕ ವರ್ಗಕ್ಕೆ, ಚೀನಾ, ಕ್ಯೂಬ, ಉತ್ತರ ಕೊರಿಯ ಮತ್ತು ವಿಯೆಟ್ನಾಮ್‌ಗಳಲ್ಲಿ ಎಲ್ಲಾ ಬೆದರಿಕೆಗಳನ್ನು ಎದುರಿಸಿ ಸಮಾಜವಾದದ ರಕ್ಷಣೆಗೆ ನಿಂತಿರುವ ಅಲ್ಲಿಯ ದುಡಿಯುವ ಜನಗಳ ಹೋರಾಟದೊಂದಿಗೆ ಈ ದುಡಿಯುವ ಜನರ ಅಂತರ್ರಾಷ್ಟ್ರೀಯ ಸೌಹಾರ್ದದ ದಿನವಾದ ಮೇ ದಿನದಂದು ಸಿ.ಐ.ಟಿ.ಯು. ತನ್ನ ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಭಾರತದಲ್ಲಿ ಸಾಮ್ರಾಜ್ಯಶಾಹಿ ಸಂಸ್ಥೆಗಳ ಆದೇಶದಂತೆ ನಡೆಯುತ್ತಿರುವ ಹೊಸ ಆರ್ಥಿಕ ನೀತಿಗಳ ವಿರುದ್ಧ ನಾಲ್ಕು ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿ, ಒಂದು ದೃಢ ಹೋರಾಟಕ್ಕಿಳಿದಿರುವ ಕಾರ್ಮಿಕ ವರ್ಗ, ಕಾರ್ಮಿಕ ಸಂಘಟನೆಗಳೂ ಹಾಗೂ ಇತರ ಸಾಮೂಹಿಕ ಸಂಘಟನೆಗಳನ್ನು ಮೇ ದಿನದಂದು ಸಿ.ಐ.ಟಿ.ಯು ಅಭಿನಂದಿಸಿದೆ.

ಬೀಡಿ ಕಾರ್ಮಿಕರ ಹೋರಾಟ ಮೇ 2 ರಿಂದ ಉಪವಾಸ ಸತ್ಯಾಗ್ರಹ

ಕನಿಷ್ಠ ಕೂಲಿಯ ಪರಿಷ್ಕರಣೆ, ನೋಟಿಫೈ ಆದ ಕನಿಷ್ಠ ಕೂಲಿ ಜ್ಯಾರಿಗೆ ಕೂಲಿ ಪತ್ರಗಳ ನೀಡಿಕೆ, ಇ.ಎಸ್.ಐ., ಪಿ.ಎಫ್., ಗ್ರಾಚ್ಯುಟಿ ಹಾಗೂ ಲಾಭ ಆಧಾರಿತ ಬೋನಸ್‌ನ ಅನುಷ್ಠಾನ, ರಾಜ್ಯಾದ್ಯಂತ ಬೀಡಿ ಕಾರ್ಮಿಕರ ಸರ್ವೆ, ಬೀಡಿ ಕಾರ್ಮಿಕರು ಸಾಕಷ್ಟು ಸಂಖ್ಯೆಯಲ್ಲಿರುವ ಕಡೆ ಅಧಿಕಾರಿಗಳಿಂದ ಬೀಡಿ ಕಾರ್ಮಿಕರ ರಿಜಿಸ್ಟರ್ ಇಡುವ ಕ್ರಮ ಇವನ್ನೆಲ್ಲಾ ಒತ್ತಾಯಿಸಿ ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಪ್ರತಿನಿಧಿಗಳು ಎಪ್ರಿಲ್ 25 ರಿಂದ ಬೆಂಗಳೂರಿನಲ್ಲಿ ವಿಧಾನಸೌಧದ ಎದುರು ಹಾಗೂ ಮಂಗಳೂರು ಹಾಗೂ ಬೆಳಗಾವಿಗಳಲ್ಲಿ ಜಿಲ್ಲಾಧಿಕಾರಿ ಕಚೇರಿಯೆದುರು ಅನಿರ್ದಿಷ್ಟಕಾಲದ ಧರಣಿ ಆರಂಭಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ಎಪ್ರಿಲ್ 25 ರಿಂದ ಮುಷ್ಕರವನ್ನೂ ನಡೆಸಿದರು.

ಈ ನಡುವೆ ರಾಜ್ಯ ಕಾರ್ಮಿಕ ಮಂತ್ರಿಗಳು ಎಪ್ರಿಲ್ 26 ರಂದು ಒಂದು ತ್ರಿಪಕ್ಷೀಯ ಸಭೆ ಕರೆದಿದ್ದು ಅದರಲ್ಲಿ ಸಿಐಟಿಯು ಕನಿಷ್ಠ ಕೂಲಿ ಪರಿಷ್ಕರಿಸಿ ತಕ್ಷಣ ಕರಡು ನೋಟಿಫಿಕೇಷನ್ ಜ್ಯಾರಿ ಗೊಳಿಸಬೇಕೆಂದು ಒತ್ತಾಯಿಸಿತು. ಕಾರ್ಮಿಕ ಮಂತ್ರಿಗಳು ಕೂಲಿಗಳನ್ನು ಪರಿಷ್ಕರಿಸುವ ಭರವಸೆ ನೀಡಿದರೂ ಕರಡು ನೋಟಿಫಿಕೇಷನ್ ಬಗ್ಗೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಿಲ್ಲ.

ಸದ್ಯ ಧರಣಿ ಹಾಗೂ ಮುಷ್ಕರವನ್ನು ಹಿಂತೆಗೆದುಕೊಂಡು ಸರಕಾರ ಕರಡು ನೋಟಿಫಿಕೇಷನ್ ಜ್ಯಾರಿ ಮಾಡದಿದ್ದರೆ ಮೇ 2 ರಿಂದ ವಿಧಾನಸೌಧದ ಎದುರು ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಆರಂಭಿಸಬೇಕೆಂದು ಸಿಐಟಿಯು ಮುಖಂಡರು ಬೀಡಿ ಕಾರ್ಮಿಕರ ಸಂಘಗಳಿಗೆ ಸಲಹೆ ನೀಡಿದ್ದಾರೆ. ಸಿಐಟಿಯು ರಾಜ್ಯ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ಪ್ರಧಾನ ಕಾರ್ಯದರ್ಶಿ ಹಾಗೂ ಬೀಡಿ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷರಾದ ವಿ.ಜೆ.ಕೆ. ನಾಯರ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎನ್.ಕೆ. ಉಪಾಧ್ಯಾಯ ಮತ್ತಿತರ ಸಿಐಟಿಯು ಮುಖಂಡರು ಈ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಾರೆ ಎಂದು ಸಿಐಟಿಯು ರಾಜ್ಯ ಸಮಿತಿ ಹೇಳಿಕೆ ತಿಳಿಸಿದೆ.

ಹಣಕಾಸು ಮಂತ್ರಿಗಳು ಬಜೆಟ್ ಭಾಷಣದಲ್ಲಿ ಕನಿಷ್ಠ ಕೂಲಿ ಅಗತ್ಯ ಆಧಾರಿತ ಕನಿಷ್ಠಕ್ಕಿಂತ ಕಮ್ಮಿ ಮಟ್ಟದಲ್ಲಿ ಇರುವುದಿಲ್ಲ ಎಂದು ಹೇಳಿದ್ದರೂ ವಾಸ್ತವವಾಗಿ ರಾಜ್ಯ ಕನಿಷ್ಠ ಕೂಲಿ ಸಲಹಾ ಸಮಿತಿ 1993 ರಲ್ಲಿ ಸೂಚಿಸಿದ್ದ ಮಟ್ಟಕ್ಕಿಂತ ಕೆಳಗಿನ ಮಟ್ಟದಲ್ಲೂ ಕೂಡಾ ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿರ್ದಿಷ್ಟಪಡಿಸಿ ಕರಡು ಮೇಲೆ ನೋಟಿಫಿಕೇಶನ್ ಹೊರಡಿಸಲು ಕೂಡ ಸರಕಾರೀ ಯಂತ್ರ ಸಿದ್ಧವಿಲ್ಲ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ.



ಓದುಗರ, ಏಜೆಂಸಿದಾರರ ಗಮನಕ್ಕೆ

ದಿ. 30.4.1995ರ ಸಂಚಿಕೆಯನ್ನು ಮುದ್ರಣ ಕಾಗದದ ಬೆಲೆ ಹೆಚ್ಚಳ ಹಾಗೂ ಹಣದ ಮುಗ್ಗಟ್ಟಿನಿಂದ ಪ್ರಕಟಿಸಲಾಗಲಿಲ್ಲ. ಏಜೆಂಸಿದಾರರು ತಮ್ಮ ಬಾಕಿ ಹಣವನ್ನು ಸಾಧ್ಯವಾದಷ್ಟು ಬೇಗನೇ ಕಳುಹಿಸಿ ಸಹಕರಿಸಬೇಕಾಗಿ ಕೋರುತ್ತೇವೆ.

ಸಿಪಿಐ(ಎಂ) 15

ಹುತಾತ್ಮರಿಗೆ ಲಾಲ್ ಸಲಾಂ!!

ಹದಿನೈದನೇ ಮಹಾಧಿವೇಶನದ ಶ್ರದ್ಧಾಂಜಲಿ

ಕಳೆದ ಮೂರು ವರ್ಷಗಳಲ್ಲಿ ದುಡಿಯುವ ಜನತೆಯ ರಕ್ಷಣೆಗೆ, ಪ್ರಜಾಸತ್ತಾತ್ಮಕ ಚಳುವಳಿಗೆ ಮತ್ತು ರಾಷ್ಟ್ರೀಯ ಐಕ್ಯತೆಗೆ ತಮ್ಮ ಪ್ರಾಣವನ್ನು ಅರ್ಪಿಸಿದ ಹುತಾತ್ಮರಿಗೆ 15ನೇ ಮಹಾಧಿವೇಶನ ಕ್ರಾಂತಿಕಾರಿ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಮಹಾಧಿವೇಶನ ಕಾಂಗ್ರೆ-ಟಿಯುಜೆಎಸ್ ಆಡಳಿತ ಹಾಗೂ ಉಗ್ರಗಾಮಿ ಗುಂಪುಗಳ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯಿಂದ ತ್ರಿಪುರಾದಲ್ಲಿ ಕೊಲೆಯಾದ 226 ಪಕ್ಷ ಹಾಗೂ ಪ್ರಜಾಸತ್ತಾತ್ಮಕ ಸಂಘಟನೆಗಳ ವೀರ ಹುತಾತ್ಮರಿಗೆ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಖಾಲಿಸ್ತಾನಿ ಭಯೋತ್ಪಾದಕರ ವಿರುದ್ಧ ಹೋರಾಟದಲ್ಲಿ ಹಾಗೂ ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ ಪ್ರಾಣ ಅರ್ಪಿಸಿದ ಪಂಜಾಬಿನ ಸಂಗಾತಿಗಳಿಗೆ ಮಹಾಧಿವೇಶನ ತನ್ನ ಗೌರವಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರ ಅಪಾರ ತ್ಯಾಗದಿಂದ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿಯ ಉಜ್ವಲ ಪರಂಪರೆಯನ್ನು ಎತ್ತಿ ಹಿಡಿದು ಮುಂದಕ್ಕೆ ಒಯ್ದಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ 291 ಹುತಾತ್ಮರು, ವರ್ಗ ಹೋರಾಟಗಳಲ್ಲಿ ಹಾಗೂ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ನಿಲುಮೆ ಎತ್ತಿ ಹಿಡಿಯುತ್ತಾ ಪ್ರಾಣವನ್ನು ಅರ್ಪಿಸಿದರು. ಮಹಾಧಿವೇಶನ ಈ ಹುತಾತ್ಮರಿಗೆ ತನ್ನ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಕೇರಳದಲ್ಲಿ ಕಾಂಗ್ರೆ-ಆರ್‌ಎಸ್‌ಎಸ್ ಮತ್ತು ಸಮಾಜ-ವಿರೋಧಿ ಶಕ್ತಿಗಳ ಕೈಯಲ್ಲಿ ಕೊಲೆಯಾದ 42 ಸಂಗಾತಿಗಳನ್ನು ಸ್ಮರಿಸುತ್ತಾ ಮಹಾಧಿವೇಶನ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ. ಕೂತ್ತುಪುರಂಬುದಲ್ಲಿ ಪೋಲೀಸ್ ಗೋಲೀಬಾರ್ ನಲ್ಲಿ ಕೊಲ್ಲಲ್ಪಟ್ಟಿದ್ದ ಯುವ ಹುತಾತ್ಮರಿಗೆ ಮಹಾಧಿವೇಶನ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಬಿಹಾರದ 35 ಸಂಗಾತಿಗಳನ್ನು ಸ್ಮರಿಸುತ್ತಾ ಮಹಾಧಿವೇಶನ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರು ಬಿಹಾರದ ವಿವಿಧ ಜಿಲ್ಲೆಗಳಲ್ಲಿ ಭೂ ಹೋರಾಟದ ಸಂದರ್ಭದಲ್ಲಿ ಭೂಮಾಲಿಕರ ಗೂಂಡಾಗಳು ಹಾಗೂ ಪೋಲೀಸರಿಂದ ಕೊಲ್ಲಲ್ಪಟ್ಟರು.

ಆಂಧ್ರಪ್ರದೇಶದಲ್ಲಿ ಕಳೆದ ಮಹಾಧಿವೇಶನದಿಂದ ಈವರೆಗೆ ನಕ್ಸಲೈಟರ ಹಾಗೂ ಭೂಮಾಲಿಕರ ಗೂಂಡಾಗಳಿಂದ ಕೊಲ್ಲಲ್ಪಟ್ಟ ಹುತಾತ್ಮ ಸಂಗಾತಿಗಳಿಗೆ 15ನೇ ಮಹಾಧಿವೇಶನ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಜಮ್ಮು ಕಾಶ್ಮೀರದಲ್ಲಿ ಏಳು ಸಂಗಾತಿಗಳನ್ನು ಮೂಲಭೂತವಾದಿ ಹಾಗೂ ಉಗ್ರಗಾಮಿ ಭಯೋತ್ಪಾದಕರು ಕೊಲೆ ಮಾಡಿದ್ದಾರೆ. ಪಕ್ಷ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಬಿಟ್ಟು ಕೊಡಲು ಒಪ್ಪದೆ ಅದಕ್ಕಾಗಿ ಪ್ರಾಣ ಅರ್ಪಿಸಿದ ಈ ಸಂಗಾತಿಗಳನ್ನು 15ನೇ ಮಹಾಧಿವೇಶನ ಸ್ಮರಿಸುತ್ತದೆ.

15ನೇ ಮಹಾಧಿವೇಶನ ಈ ವೀರ ಹುತಾತ್ಮರ ಸ್ಮರಣೆಯಲ್ಲಿ ಕೆಂಬಾವುಟವನ್ನು ಬಾಗಿಸುತ್ತದೆ. ಅವರ ಮಹಾನ್ ಆದರ್ಶ ಪಕ್ಷಕ್ಕೆ ಎಂದೆಂದಿಗೂ ಸ್ಫೂರ್ತಿಯ ಚಿಲುಮೆಯಾಗಿರುತ್ತದೆ. ಅವರು ತಮ್ಮ ಪ್ರಾಣಗಳನ್ನು ಅರ್ಪಿಸಿದ ಆದರ್ಶಗಳನ್ನು ಪಕ್ಷ ಮುಂದೊಯ್ಯುವ ಪ್ರತಿಜ್ಞೆ ಮಾಡುತ್ತದೆ. ಮಹಾಧಿವೇಶನ ಈ ಹುತಾತ್ಮ ಸಂಗಾತಿಗಳ ಕುಟುಂಬಗಳಿಗೆ ತನ್ನ ಹೃತ್ಪೂರ್ವಕ ಕಂಬನಿ ಹಾಗೂ ಸಹಾನುಭೂತಿಯನ್ನು ತಿಳಿಸಲು ಇಚ್ಛಿಸುತ್ತದೆ.

15ನೇ ಮಹಾಧಿವೇಶನದ ಹುತಾತ್ಮ ಸ್ಥಂಭ



ಅಗಲಿದ ನಾಯಕರಿಗೆ ಶ್ರದ್ಧಾಂಜಲಿ

15ನೇ ಮಹಾಧಿವೇಶನ ಕಳೆದ ಮಹಾದಿವೇಶನದ ನತರ ಅಗಲಿದ ಹಿರಿಯ ನಾಯಕರಿಗೆ ಪ್ರತ್ಯೇಕ ಶ್ರದ್ಧಾಂಜಲಿ ನಿರ್ಣಯಗಳನ್ನು ಅಂಗೀಕರಿಸಿತು. ಈ ನಿರ್ಣಯಗಳಲ್ಲಿ ಅವರ ಜೀವನದ ಪ್ರಮುಖ ಅಂಶಗಳು, ಹಾಗೂ ಪಕ್ಷಕ್ಕೆ ಅವರ ಕೊಡುಗೆಯನ್ನು ಸ್ಮರಿಸಲಾಯಿತು. ಕಾಮ್ರೇಡ್ ಬಸವಪುನ್ನಯ್ಯ, ಕಾಮ್ರೇಡ್ ಅಚಿಂತ್ಯ ಭಟ್ಟಾಚಾರ್ಯ, ಕಾಮ್ರೇಡ್ ಮನೋರಂಜನ್ ರಾಯ್, ಕಾಮ್ರೇಡ್ ರೊಬಿನ್ ಸೇನ್ ರವರ ಸ್ಮರಣೆಯಲ್ಲಿ ಮಹಾಧಿವೇಶನ ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಿತು.

ಕಾಮ್ರೇಡ್ ಬಸವಪುನ್ನಯ್ಯ: 1934ರಲ್ಲಿ ದೇಶದ ಸ್ವಾತಂತ್ರ್ಯ ಹೋರಾಟ ಹಾಗೂ ಕಮ್ಯುನಿಸ್ಟ್ ಚಳುವಳಿ ಸೇರಿ ಸುಮಾರು ಐದು ದಶಕಗಳ ದೀರ್ಘ ಕಾಲ ತನ್ನ ಜೀವನವನ್ನು ಅದಕ್ಕಾಗಿ ಮುಡಿಪಾಗಿಟ್ಟ ಧೀಮಂತ ಹಿರಿಯ ನಾಯಕ. 1943ರಲ್ಲಿ ಆಂಧ್ರಪ್ರದೇಶದ ಗುಂಟೂರಿನ ಜಿಲ್ಲಾ ಮಟ್ಟದಲ್ಲಿ ಆರಂಭಿಸಿ ರಾಜ್ಯ ಮಟ್ಟದ ನಾಯಕರಾದರು. ತೆಲಂಗಾಣ ಹೋರಾಟದ ನಾಯಕತ್ವ ವಹಿಸಿ ಅವರು ದೇಶದ ಕಮ್ಯುನಿಸ್ಟ್ ಚಳುವಳಿಯಹಿರಿಯ ನಾಯಕರಾಗಿ ಹೊರಹೊಮ್ಮಿದರು. 1948ರಲ್ಲಿ ಎರಡನೇ ಕಾಂಗ್ರೆಸ್ಸಿನಲ್ಲಿ ಕೇಂದ್ರ ಸಮಿತಿ ಹಾಗೂ ಪೊಲಿಟ್ ಬ್ಯೂರೋಗೆ ಆಯ್ಕೆಯಾದ ಅವರು ಮರಣದವರೆಗೆ ಈ ನಾಯಕತ್ವದ ಸ್ಥಾನದಲ್ಲಿದ್ದರು. ತೆಲಂಗಾಣ ಹೋರಾಟದ ಅಮೋಘ ಅನುಭವವನ್ನು ಅರಗಿಸಿದ ಅವರು ನಮ್ಮ ಪಕ್ಷದ ಕಾರ್ಯಯೋಜನೆ ಹಾಗೂ ಕಾರ್ಯತಂತ್ರದ ಹಾದಿಯನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಈ ಹಾದಿಯನ್ನು ನಿರ್ಮಿಸುತ್ತಾ ಸಿಪಿಐ(ಎಂ)ನ ಸ್ಥಾಪನೆ ಹಾಗೂ ಅದರ ಕಾರ್ಯಕ್ರಮ ರೂಪಿಸುವಲ್ಲಿ ಅವರ ವಿಶಿಷ್ಟ ಪಾತ್ರವನ್ನು ನಿರ್ಣಯ ಸ್ಮರಿಸಿದೆ. ಈ ಹಾದಿಯನ್ನು ಸಾಧಿಸುವಲ್ಲಿ ಬಲ-ಪರಿಷ್ಕರಣವಾದ ಹಾಗೂ ಎಡ-ದುಸ್ಸಾಹಸವಾದದ ವಿರುದ್ಧ ಹೋರಾಟದಲ್ಲಿ ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಅವರ ಪ್ರಮುಖ ಪಾತ್ರವನ್ನು ನಿರ್ಣಯ ವಿಶೇಷವಾಗಿ ಸ್ಮರಿಸಿದೆ. ಅತ್ಯುತ್ತಮ ವಿದ್ವಾಂಸ, ಲೇಖಕರಾಗಿದ್ದ ಅವರು ಪಕ್ಷದ ಪತ್ರಿಕೆಯ ಸಂಪಾದಕರಾಗಿದ್ದರು. ಪಕ್ಷದ ಹಲವಾರು ಪ್ರಮುಖ ದಸ್ತಾವೇಜುಗಳ ಕರಡುಗಳ ಅವರ ಲೇಖನಿಯಿಂದ ಹೊಮ್ಮಿದ್ದವು. ಅವರು 14 ವರ್ಷಗಳ ಕಾಲ ರಾಜ್ಯ ಸಭಾ ಸದಸ್ಯರಾಗಿ ಪಾರ್ಲಿಮೆಂಟರಿ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದರು.

ಕಾಮ್ರೇಡ್ ಅಚಿಂತ್ಯ ಭಟ್ಟಾಚಾರ್ಯ: 1935ರಲ್ಲಿ ವಿದ್ಯಾರ್ಥಿಯಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಅಸ್ಸಾಂನಲ್ಲಿ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕರಲ್ಲಿ ಒಬ್ಬರು. ಅಸ್ಸಾಂನ ಕಾಚಾರ್ ಜಿಲ್ಲಾ ಕಾರ್ಯದರ್ಶಿಯಾಗಿ, 1958ರಲ್ಲಿ ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಕೌನ್ಸಿಲ್‌ಗೆ ಆಯ್ಕೆಯಾಗಿ ಅವರ ನಿಧನದವರೆಗೆ ಕೇಂದ್ರ ನಾಯಕತ್ವದ ಭಾಗವಾಗಿದ್ದರು. 1964ರಿಂದ 1980ರವರೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿದ್ದರು. ಅಸ್ಸಾಂನ ಟೀ ಪ್ಲಾಂಟೇಶನ್ ಕಾರ್ಮಿಕರ ಪ್ರಮುಖ ಸಂಘಟಕರಾಗಿದ್ದ ಅವರಿಗೆ, ಅಸ್ಸಾಂನ ಜನಾಂಗೀಯ ಪ್ರಶ್ನೆ ಬಗ್ಗೆ ಆಳವಾದ ಜ್ಞಾನವಿತ್ತು, ಅವರು ರೈತ-ಹೋರಾಟದಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದ, ನಿಧನದ ಸಮಯದಲ್ಲಿ ಅಸ್ಸಾಂ ಕಿಸಾನ್ ಸಭಾ ಘಟಕದ ಅಧ್ಯಕ್ಷರಾಗಿದ್ದರು ಎಂದು ಶ್ರದ್ಧಾಂಜಲಿ ನಿರ್ಣಯ ಹೇಳಿದೆ.

ಕಾಮ್ರೇಡ್ ಮನೋರಂಜನ್ ರಾಯ್: ಜುಗಾಂತರ್ ಎಂಬ ಕ್ರಾಂತಿಕಾರಿ ಗುಂಪಿನ ಮೂಲಕ ರಾಷ್ಟ್ರೀಯ ಹೋರಾಟದಲ್ಲಿ 1930ರಲ್ಲಿ ಧುಮುಕಿ ಜೈಲಿನಲ್ಲಿ ಮಾರ್ಕ್ಸ್‌ವಾದದತ್ತ ಹೊರಳಿದವರು. 1938ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಅವರು ಉತ್ತರ ಬಂಗಾಳದ ಟೀ ಗಾರ್ಡನ್ ಕಾರ್ಮಿಕರ ಚಳುವಳಿಯ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದು, ಪ್ರಮುಖ ಟ್ರೇಡ್ ಯೂನಿಯನ್ ನಾಯಕರಾಗಿ ಹೊಮ್ಮಿದರು. 1970ರಲ್ಲಿ ಸ್ಥಾಪನೆಯ ಸಮಯದಿಂದ ಸಿಐಟಿಯು ಉಪಾಧ್ಯಕ್ಷರಾಗಿದ್ದ ಅವರು, ದೀರ್ಘ ಕಾಲ ಸಿಐಟಿಯು ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿದ್ದರು. 1977ರಲ್ಲಿ ಪಶ್ಚಿಮ ಬಂಗಾಳದ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಹಾಗೂ 1978ರಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾಗಿ ಪಕ್ಷದ ನಾಯಕತ್ವ ವಹಿಸಿದ್ದರು. ನಿಧನದ ಸಮಯದಲ್ಲಿ ಅವರು ಸಿಐಟಿಯುನ ರಾಜ್ಯ ಘಟಕದ ಅಧ್ಯಕ್ಷರೂ ಆಗಿದ್ದರು. ಅವರು ಪ.ಬಂಗಾಳದ ವಿಧಾನಸಭೆ ಹಾಗೂ ರಾಜ್ಯ ಸಭೆಯ ಸದಸ್ಯರಾಗಿ ದೀರ್ಘ ಕಾಲ ಸೇವೆ ಸಲ್ಲಿಸಿದ್ದರು ಎಂದು ನಿರ್ಣಯ ಸ್ಮರಿಸಿದೆ.

ಕಾಮ್ರೇಡ್ ರೊಬಿನ್ ಸೇನ್: ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕಿ ಎರಡನೇ ಮಹಾಯುದ್ಧ ಸಮಯದಲ್ಲಿ ರಾಯಲ್ ವಾಯು ಸೇನೆಯಲ್ಲಿದ್ದು, ಕೋರ್ಟ್ ಮಾರ್ಶಲ್‌ನಲ್ಲಿ ಸೈನ್ಯದಿಂದ ಹೊರದಬ್ಬಲ್ಪಟ್ಟವರು. 1953ರಲ್ಲಿ ಪಕ್ಷ ಸೇರಿ ಅಸ್ನಸ್ ಸೋಲ್-ರಾಣಿಗಂಜ್ ಕ್ಷೇತ್ರದಲ್ಲಿ ಟ್ರೇಡ್ ಯೂನಿಯನ್ ಕ್ಷೇತ್ರದಲ್ಲಿ ದುಡಿದವರು. ಬರ್ದ್ವಾನ್ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ 15 ವರ್ಷಗಳ ಕಾಲ ಪಕ್ಷ ಕಟ್ಟಿದವರು. ಅವರು ನಿಧನದ ಸಮಯದಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ಕೇಂದ್ರೀಯ ಕಂಟ್ರೋಲ್ ಕಮೀಶನ್‌ನ ಸದಸ್ಯರಾಗಿದ್ದರು ಎಂದು ನಿರ್ಣಯ ಹೇಳಿದೆ.

ಸೌಹಾರ್ದ ಪಕ್ಷಗಳ ನಾಯಕರಿಗೆ ಶ್ರದ್ಧಾಂಜಲಿ: 15ನೇ ಮಹಾಧಿವೇಶನದ ಸೌಹಾರ್ದ ಪಕ್ಷಗಳ ಹಾಗೂ ಅಂತರ್‌ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಪ್ರಮುಖ ನಾಯಕರಿಗೆ ಒಂದು ಪ್ರತ್ಯೇಕ ನಿರ್ಣಯದಲ್ಲಿ ಶ್ರದ್ಧಾಂಜಲಿ ಅರ್ಪಿಸಿದ ನಿರ್ಣಯ ಶ್ರದ್ಧಾಂಜಲಿ ಅರ್ಪಿಸಿದ ಪ್ರಮುಖ ನಾಯಕರೆಂದರೆ

ಕಾಮ್ರೇಡ್ ಕಿಮ್-ಇಲ್-ಸುಂಗ್: ಕೊರಿಯಾದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಧೀಮಂತ ನಾಯಕ ಹಾಗೂ ಉತ್ತರ ಕೊರಿಯಾದಲ್ಲಿ ಸಮಾಜವಾದದ ಸ್ಥಾಪನೆಯ ಹೋರಾಟದ ಪ್ರಮುಖ ನಾಯಕ ಅಂತರ್‌ರಾಷ್ಟ್ರೀಯ ಚಳುವಳಿಗೆ ಅವರ ಅಪಾರ ಕೊಡುಗೆಯನ್ನು ನಿರ್ಣಯ ಸ್ಮರಿಸಿದೆ.

ಎರಿಕ್ ಹೊನೆಕರ್: ಜರ್ಮನ್ ಗಣರಾಜ್ಯದ ಸ್ಥಾಪಕ ಹಾಗೂ ಜರ್ಮನಿಯ ಸೋಶಲಿಸ್ಟ್ ಯೂನಿಟ್ ಪಾರ್ಟಿಯ ನಾಯಕ, ಫ್ಯಾಸಿಸ್ಟ್ ವಿರೋಧಿ ಹೋರಾಟ ಹಾಗೂ ಅಂತರ್‌ರಾಷ್ಟ್ರೀಯ ಚಳುವಳಿಯಲ್ಲಿ ಅವರ ಪ್ರಮುಖ ಪಾತ್ರವನ್ನು ನಿರ್ಣಯ ಸ್ಮರಿಸಿದೆ.

ಜೋಸ್ಲೋವೋ: ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ, ವರ್ಣ ಭೇದ-ವಿರೋಧಿ ಹೋರಾಟದ ಹಿರಿಯ ನಾಯಕ.

ಕ್ರಿಸ್ ಹನಿ: ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿ ಹ್ವಾಗೂ ಎಎನ್ ಸಿಯ ಭೂಗತ ಸಶಸ್ತ್ರ ಘಟಕದ ನಾಯಕ

ಲೀ ಕ್ಸಿಯಾನ್ನಿಯನ್: ಚೀನಾ ಜನತಾ ಗಣರಾಜ್ಯದ ಮಾಜಿ ಅಧ್ಯಕ್ಷ, ಚೀನಿ ಜನತಾ ರಾಜಕೀಯ ಕೌನ್ಸಿಲ್ ನ ಅಧ್ಯಕ್ಷ

ಮದನ್ ಭಂಡಾರಿ, ಜೀವರಾಜ್ ಆಶ್ರಿತ್: ನೇಪಾಳಿ ಕಮ್ಯುನಿಸ್ಟ್ ಪಕ್ಷ(ಐಕ್ಯ ಮಾರ್ಕ್ಸ್‌ವಾದಿ-ಲೆನಿನ್ ವಾದಿ)ದ ಪೊಲಿಟ್ ಬ್ಯೂರೋ ಸದಸ್ಯರು

ಕಾಯಸೇನ್ ಫೋಮ ವಿಹಾನೆ: ಲಾವೋಸ್ ಜನತಾ ಗಣರಾಜ್ಯದ ಅಧ್ಯಕ್ಷ, ಲಾವೋಸ್ ಜನತಾ ಕ್ರಾಂತಿಕಾರಿ ಪಕ್ಷದ ಅಧ್ಯಕ್ಷ

15ನೇ ಮಹಾಧಿವೇಶನ ಅಗಲಿದ ಸಿಪಿ ಐನ ಈ ಕೆಳಗಿನ ನಾಯಕರಿಗೆ ತನ್ನ ಶ್ರದ್ಧಾಂಜಲಿ ಅರ್ಪಿಸಿತು.

ಸಿ.ರಾಜೇಶ್ವರಿರಾವ್, ಎನ್.ಕೆ. ಕೃಷ್ಣನ್, ಎನ್.ಇ.ಬಲರಾಂ, ರಾಜಶೇಕರ ರೆಡ್ಡಿ, ಕಲ್ಪನಾ ಜೋಷಿ.

ಸುರ್ಜಿತ್ ಶಹೀದಿ ಜ್ಯೋತಿ ಜಾಥಾದ ಸ್ವಯಂ ಸೇವಕರಿಂದ ಕೆಂಬಾವುಟ ಪಡೆಯುತ್ತಿದ್ದಾರೆ



ಕೊಜೆಂಟ್ರಿಕ್ಸ್‌ಗೆ ಒಪ್ಪಿಗೆ ವಿರುದ್ಧ ಹೋರಾಡುವ ಪ್ರತಿಜ್ಞೆ ಮಾಡಬೇಕು.

1995ರ ಮೇ ದಿನದ ಸಂದರ್ಭದಲ್ಲಿ ದೇಶದಲ್ಲಿ, ರಾಜ್ಯದಲ್ಲಿನ ಪ್ರಸ್ತುತ ಸನ್ನಿವೇಶದ ಮೇಲೆ ಒಂದು ಹಕ್ಕಿ ನೋಟ ಬೀರುತ್ತಾ ನಿರುದ್ಯೋಗ, ಬೆಲೆಯೇರಿಕೆಗೆ ಕಾರಣವಾಗುವ, ಸ್ವಾವಲಂಬನೆಗೆ ಧಕ್ಕೆ ತರುವ ಧೋರಣೆಗಳ ವಿರುದ್ಧ, ಕಾರ್ಮಿಕ ವರ್ಗದ ಐಕ್ಯತೆಯನ್ನು ಮುರಿಯುವ ಸಂಚುಗಳ ವಿರುದ್ಧ ಹೋರಾಟದ ಪ್ರತಿಜ್ಞೆ ಮಾಡಬೇಕು, ದೇಶದ ಎಲ್ಲಾ ಕಾರ್ಮಿಕರನ್ನು ಒಂದೇ ವೇದಿಕೆಗೆ ಅಂದರೆ ಕಾರ್ಮಿಕ ಸಂಘಗಳ ಒಂದು ಮಹಾಒಕ್ಕೂಟದ ವೇದಿಕೆಗೆ ತಂದು ದೇಶದ ಕಾರ್ಮಿಕರ ಹಕ್ಕುಗಳಿಗಾಗಿ ಅತಿ ಹೆಚ್ಚು ಶಕ್ತಿಶಾಲಿಯಾಗಿ ಹೋರಾಡಲು ಶ್ರಮಿಸಬೇಕು ಎನ್ನುತ್ತಾರೆ ಅಖಿಲ ಭಾರತ ಸಿಐಟಿಯು ಉಪಾಧ್ಯಕ್ಷರೂ, ರಾಜ್ಯ ಅಧ್ಯಕ್ಷರೂ ಆದ ಕಾಂ. ಎಸ್. ಸೂರ್ಯನಾರಾಯಣರಾವ್

-ಎಸ್. ಸೂರ್ಯನಾರಾಯಣರಾವ್

ಮೇ ದಿನ ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ದಿನ, ಒಂದು ನೂರು ವರ್ಷದ ಕೆಳಗೆ ಜಗತ್ತಿನ ಯಾವ ಭಾಗದಲ್ಲೂ 8 ಗಂಟೆ ಕೆಲಸ, 8 ಗಂಟೆ ವಿರಾಮ, 8ಗಂಟೆ ನಿದ್ರೆ ಇರಲಿಲ್ಲ. ಇದಕ್ಕೆ ಪ್ರತಿಭಟಿಸಿದ ಚಿಕಾಗೋ ನಗರದ ಕಾರ್ಮಿಕರನ್ನು ಗುಂಡಿಟ್ಟು ಕೊಲ್ಲಲಾಯಿತು. 4 ಜನ ಕಾರ್ಮಿಕರನ್ನು ನೇಣುಗಂಬಕ್ಕೆ ಹಾಕಲಾಯಿತು. ಇದರಿಂದ ಎಚ್ಚೆತ್ತ ಕಾರ್ಮಿಕರು ಪ್ಯಾರಿಸ್ ನಲ್ಲಿ ಸೇರಿ ಫ್ರೆಡರಿಕ್ ಎಂಗೆಲ್ಸ್ ಮುಖಂಡತ್ವದಲ್ಲಿ 8 ಘಂಟೆಯ ಬೇಡಿಕೆ ಇಟ್ಟು, ಇದು ಜಗತ್ತಿನ ಕಾರ್ಮಿಕರ ಬೇಡಿಕೆಯಾಗಿರುವುದರಿಂದ ಜಗತ್ತಿನ ಕಾರ್ಮಿಕರು ಈ ಬೇಡಿಕೆಗೆ ಜಗತ್ತಿನಾದ್ಯಂತ ಧ್ವನಿಗೂಡಿಸಬೇಕು, ಈ ಸುಲಿಗೆ ತಪ್ಪಿಸಲು ಧ್ವನಿ ಎತ್ತ ಬೇಕೆಂದು ಮೇ ಒಂದರಂದು ಜಗತ್ತಿನಾದ್ಯಂತ ಮೇ ದಿನವೆಂದು ಆಚರಿಸಬೇಕೆಂದು ತಿರ್ಮಾನಿಸಲಾಯಿತು.

8 ಗಂಟೆ ಕೆಲಸ ಕೇಳಿದ್ದಕ್ಕೆ ಗುಂಡಿಟ್ಟು ಕೊಂದು ನೇಣು ಗಂಭಕ್ಕೆ ಹಾಕಿದ ಶಕ್ತಿ ಮಾಲಕ ವರ್ಗ, ಜಗತ್ತಿನ ಹೋರಾಟದ ಫಲವಾಗಿ 8 ಘಂಟೆ ಕೆಲಸವನ್ನು ಕಾನೂನು ಪ್ರಕಾರವಾಗಿ ಮಾಡಬೇಕಾಗಿ ಬಂತು. ನಮ್ಮ ದೇಶದಲ್ಲೂ ಸಹ 1948ರಲ್ಲಿ ಈ ಕಾನೂನು ಮಾಡಲಾಯಿತು. ದುರದೃಷ್ಟದ ಸಂಗತಿ ಏನೆಂದರೆ 1995 ನೇ ಇಸ್ವಿಯಲ್ಲೂ ಸಹ ಲಕ್ಷಾಂತರ ಕಾರ್ಮಿಕರಿಗೆ ನಮ್ಮ ರಾಜ್ಯದಲ್ಲಿ ಈ ಕಾನೂನಿನ ಸೌಲಭ್ಯ ದೊರೆಯುತ್ತಿಲ್ಲ. ಬೆಂಗಳೂರು ನಗರದಲ್ಲಿ ಕಳೆದ ತಿಂಗಳು ಈ ಬೇಡಿಕೆಗಾಗಿ 1 ಲಕ್ಷ ಕಾರ್ಮಿಕರು ಒಂದು ವಾರ ಕಾಲದ ವ[illegible]ರ ಆಚರಿಸಿದರು. ಆ ಸಮಸ್ಯೆಯನ್ನು ಬಗೆ ಹರಿಸುತ್ತೇವೆಂದು ಹೇಳಿದ ಸರ್ಕಾರ ಇನ್ನೂ ಮೀನಾ ಮೇಷ ಎಣಿಸುತ್ತಿದೆ.

ಸಿಐಟಿಯು ಮೂರನೇ ಜಗತ್ತಿನ ಕಾರ್ಮಿಕರು, ಕೃಷಿ ಕಾರ್ಮಿಕರು, ರೈತರು ಮತ್ತು ಇನ್ನಿತರ ದುಡಿಯುವ ಜನತೆಗೂ ಹಾಗೂ ಹಿತೈಷಿಗಳಿಗೂ ತನ್ನ ಶುಭಾಶಯ ಕೋರುತ್ತದೆ. ಅದು ಬಂಡವಾಳಶಾಹಿಗಳು ಮತ್ತು ಭೂಮಾಲಕರ ವಿರುದ್ಧ ಹೋರಾಡುತ್ತಿರುವುದನ್ನು ಹಾಗೂ ಸಾಮ್ರಾಜ್ಯವಾದಿಗಳ ಹೊಸ ತರಹ ದಬ್ಬಾಳಿಕೆಯನ್ನು ಎದುರಿಸುತ್ತಿರುವುದನ್ನು ಸ್ವಾಗತಿಸುತ್ತಿದೆ. ಅದೇ ರೀತಿ ಹಿಂದಿನ ಯುರೋಪಿನ ಸಮಾಜವಾದಿ ರಾಷ್ಟ್ರದಲ್ಲಿರುವ ಕಾರ್ಮಿಕರು ಈಗ ಅಲ್ಲಿ ಉದ್ಭವಿಸಿರುವ ನಿರುದ್ಯೋಗ ಸಮಾಜಿಕ ಭದ್ರತೆಯ ಕಡಿತದ ವಿರುದ್ಧ ಧ್ವನಿ ಎತ್ತಿರುವುದನ್ನು ಸಹ ಸ್ವಾಗತಿಸುತ್ತದೆ.

ಅಮೇರಿಕಾ ದೇಶದ ಅನೇಕ ಅಡೆತಡೆಗಳು, ಸಾಮ್ರಾಜ್ಯವಾದಿಗಳ ಪಿತೂರಿ ಇದ್ದರೂ ಸಹ ಚೈನಾ, ಕ್ಯೂಬಾ, ಉತ್ತರ ಕೊರಿಯಾ ವಿಯೆಟ್ನಾಂ ರಾಷ್ಟ್ರಗಳು ಸಮಾಜವಾದಿ ವ್ಯವಸ್ಥೆಯನ್ನು ಎತ್ತಿ ಹಿಡಿಯುತ್ತಿರುವುದನ್ನು ಸಿಐಟಿಯು ಸ್ವಾಗತಿಸುತ್ತದೆ.

ಗ್ಯಾಟ್ ಮೂಲಕ ಸಾಮ್ರಾಜ್ಯಶಾಹಿ ದೇಶಗಳು ಮುಕ್ತ ವ್ಯಾಪಾರದ ಹೆಸರಲ್ಲಿ ಹೊಸ ಸ್ವರೂಪದಲ್ಲಿ ನವವಸಾಹತುಶಾಹಿ ಧಾಳಿ ಆರಂಭಿಸಿವೆ. ಇದು ತಮ್ಮ ಆಳವಾದ ಬಿಕ್ಕಟ್ಟಿನಿಂದ ಹೊರಬರಲು ಶ್ರೀಮಂತ ದೇಶಗಳು ನಡೆಸಿರುವ ಪಿತೂರಿ ಎಂದು ಭಾರತದ ಕಾರ್ಮಿಕ ವರ್ಗ ಗಮನಿಸಬೇಕು.

ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯಿಂದಾಗಿ ಎಲ್ಲಾ ಸಾಮಾಗ್ರಿಗಳ ಬೆಲೆ ಏರಿ, ಎಲ್ಲಾ ವಿಭಾಗದ ಜನಗಳನ್ನು ಬಾಧಿಸುತ್ತಿದೆ. ಪಡಿತರ ಪದ್ಧತಿಯಲ್ಲಿ ಸಹ ಬೆಲೆಗಳು ಏರಿ ಲಕ್ಷಾಂತರ ಜನರಿಗೆ ಕೊಳ್ಳುವ ಶಕ್ತಿ ಇಲ್ಲದೆ ಸಂಕಷ್ಟದಲ್ಲಿದ್ದಾರೆ.

ಸರಕಾರ ನೈಜ ಭೂಸುಧಾರಣೆಯನ್ನು ಜ್ಯಾರಿಗೆ ತರಲು ನಿರಾಕರಿಸುತ್ತಲೇ ಇರುವುದರಿಂದ ರೈತಾಪಿ ಜನಗಳ ಪರಿಸ್ಥಿತಿಯೂ ಹದಗೆಡುತ್ತಿದೆ. ಕೃಷಿ ಕೂಲಿಕಾರರ ಸಂಖ್ಯೆ ಸತತವಾಗಿ ಹೆಚ್ಚುತ್ತಲೆ ಇದೆ. ಅವರಿಗೆ ಕನಿಷ್ಠ ಕೂಲಿ ಮತ್ತು ಇತರ ಸೌಲಭ್ಯಗಳನ್ನು ಈಗಲೂ ವಂಚಿಸಲಾಗುತ್ತಿದೆ.

ಒಂದೇ ಸಮನೆ ಸಾರ್ವಜನಿಕ ಉದ್ದಿಮೆಗಳನ್ನು ರೋಗಗ್ರಸ್ಥ ಮಾಡಲು ಯೋಜಿತ ರೀತಿಯಲ್ಲಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ. ಆ ಉದ್ದಿಮೆಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುತ್ತಿಲ್ಲ, ನಮ್ಮ ದೇಶದ ಸ್ವಾವಲಂಬನೆಯನ್ನು ಕೈಬಿಟ್ಟು ವಿದ್ಯುತ್ಶಕ್ತಿ ದೂರ ಸಂಪರ್ಕ, ಹಣಕಾಸು ಸಂಸ್ಥೆ, ರೈಲ್ವೆ, ಸಾರಿಗೆ ಇಂತಹ ಮುಖ್ಯವಾದ ಉದ್ದಿಮೆಗಳನ್ನು ಸಹ ಖಾಸಗಿಯವರಿಗೆ ಒಪ್ಪಿಸಲು ತರಾತುರಿಯಲ್ಲಿದೆ. ಸಣ್ಣ ಪುಟ್ಟ ಉದ್ದಿಮೆಗಳಲ್ಲೂ ಸಹ ಬಹುರಾಷ್ಟ್ರೀಯ ಸಂಸ್ಥೆಗಳು ನುಸುಳುತ್ತಿವೆ. ಇದರಿಂದಾಗಿ ಸಾವಿರಾರು ಜನ ಬೀದಿ ಪಾಲಾಗಿದ್ದಾರೆ.

ನವಂಬರ್ ತಿಂಗಳಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನೆ ಎತ್ತಿ ಹಿಡಿದ ಕಾಂಗ್ರೆಸ್ ಭಾರಿ ಸೋಲನ್ನು ಅನುಭವಿಸಿತು. ಈ ಕಟು ಸತ್ಯ ಗೊತ್ತಿದ್ದರು ಸಹ ಜನತಾದಳ ಸರ್ಕಾರ ಹಿಂದಿನ ಕಾಂಗ್ರೆ ಸರ್ಕಾರ ಅನುಸರಿಸಿದ್ದ ಆರ್ಥಿಕ ನೀತಿಯನ್ನೇ ಅನುಸರಿಸುತ್ತಿದೆ.

ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ. ಇದಕ್ಕೆ ಮುಖ್ಯವಾಗಿ ರಾಜ್ಯ ಸರಕಾರಗಳು, ಈ ಮುಖ್ಯವಾದ ಉದ್ಯಮಕ್ಕೆ ಸಾಕಷ್ಟು ಹಣವನ್ನು ಒದಗಿಸಿ ಅಗತ್ಯವಾದ ವಿದ್ಯುತ್ಶಕ್ತಿಯನ್ನು ಉತ್ಪಾದನೆ ಮಾಡದಿರುವುದೇ ಕಾರಣವಾಗಿದೆ. ಜನತಾದಳ ಸರ್ಕಾರ ಹಿಂದಿನ ಕಾಂಗ್ರೆಸ್ ಸರ್ಕಾರ ಕೊಜೆಂಟ್ರಿಕ್ಸ್ ಕಂಪೆನಿಗೆ ಒಂದು ಸಾವಿರ ಮೆಗಾವಾಟ್ ವಿದ್ಯುತ್ಶಕ್ತಿಯನ್ನು ಉತ್ಪಾದಿಸಲು ರಾಜ್ಯದ ರೈತರ, ಗ್ರಾಹಕರ, ಸಣ್ಣ ಉದ್ದಿಮೆಗಳ ಹಿತಾಸಕ್ತಿಯನ್ನು ಬಲಿಕೊಟ್ಟು ಅವರು ಹೇಳಿದ ಷರತ್ತಿಗೆ ಒಪ್ಪಿಗೆ ನೀಡಿದನ್ನು ಮುಂದುವರೆಸಿದೆ. ಇದರ ವಿರುದ್ಧ ರಾಜ್ಯದ ದುಡಿಯುವ ವರ್ಗ ಮೇ ದಿನದಂದು ಹೋರಾಡುತ್ತೇವೆಂದು ಪ್ರತಿಜ್ಞೆ ಮಾಡಬೇಕು.

ಅದೇ ರೀತಿ ನಿರುದ್ಯೋಗಕ್ಕೆ ಬೆಲೆಯೇರಿಕೆಗೆ ಕಾರಣವಾಗುವ ಸ್ವಾವಲಂಬನೆಗೆ ಧಕ್ಕೆ ತರುವ ಎಲ್ಲಾ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗ ಇತರ ವಿಭಾಗದ ಜನರೊಂದಿಗೆ ಕೂಡಿ ಹೋರಾಡಬೇಕೆಂದು ಪ್ರತಿಜ್ಞೆ ಮಾಡಬೇಕು. ಅದೇ ರೀತಿ ದೇಶದ ಎಲ್ಲಾ ಕಾರ್ಮಿಕರನ್ನು ಒಂದೇ ವೇದಿಕೆಯಲ್ಲಿ ಎಂದರೆ ಕಾರ್ಮಿಕ ಸಂಘಗಳ ಮಹಾಒಕ್ಕೂಟವೊಂದರಲ್ಲಿ ತಂದು ಕಾರ್ಮಿಕರ ಹಕ್ಕುಗಳಿಗೆ ಅತಿ ಹೆಚ್ಚು ಶಕ್ತಿಶಾಲಿಯಾಗಿ ಹೋರಾಡಲು ಶ್ರಮಿಸಬೇಕು.

ಕಾರ್ಮಿಕ ವರ್ಗದ ಐಕ್ಯತೆ ಇಂದಿನ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿರುವುದನ್ನು ಮರೆಯದೆ ಈ ಐಕ್ಯತೆಗೆ ಮಾರಕವಾಗುತ್ತಿರುವ ಮತೀಯ ಶಕ್ತಿಗಳ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧವೂ ಎಚ್ಚೆತ್ತು ಅವನ್ನು ಹಿಮ್ಮೆಟ್ಟಿಸಲು ನಾವು ಅತಿ ಮುತುವರ್ಜಿಯಿಂದ ದುಡಿಯಬೇಕು. ಅದರಲ್ಲೂ ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನಾ ಸರ್ಕಾರ ಬಂದು ಶಿವಸೇನೆ ಮುಖಂಡ ಬಾಳಠಾಕ್ರೆ ನುಡಿದಿರುವ ಮಾತುಗಳ ಬಗ್ಗೆ ತೀವ್ರತೆಯಿಂದ ನಾವು ಅದನ್ನು ವಿರೋಧಿಸಲು ಎಲ್ಲಾ ಪ್ರಗತಿ ಪರ ಜಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸಲು ಪ್ರತಿಜ್ಞೆ ಮಾಡಬೇಕು.

ಅದೇ ರೀತಿ ಸಾಮ್ರಾಜ್ಯವಾದಿ ಶಕ್ತಿಗಳು ಕಾಶ್ಮೀರವನ್ನು ಕಬಳಿಸಲು ಯತ್ನಿಸುತ್ತಿರುವ ಸಂಚನ್ನು ಭಗ್ನ ಮಾಡಬೇಕು.

ಈ ಮೇ ದಿನದಂದು ಕಾರ್ಮಿಕ ವರ್ಗ ಮತ್ತು ಇತರ ಸಾಮೂಹಿಕ ಸಂಘಟನೆಗಳಿಗೆ ಹಾಗೂ ಪ್ರಜಾಪ್ರಭುತ್ವ ಜಾತ್ಯಾತೀತಾ ಮತ್ತು ದೇಶಪ್ರೇಮಿಗಳು ನಮ್ಮ ದೇಶದ ಐಕ್ಯತೆ, ಸಮಗ್ರತೆ ಕಾಪಾಡುವುದರೊಂದಿಗೆ ಹೊಸ ಆರ್ಥಿಕ ನೀತಿಯ ವಿರುದ್ಧ ಹೋರಾಟಕ್ಕೆ ಮತ್ತೊಮ್ಮೆ ಪಣತೊಡಬೇಕು.

- ☆ ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯನ್ನು ಎತ್ತಿ ಹಿಡಿಯೋಣ
- ☆ ದೇಶದ ಐಕ್ಯತೆ ಸಮಗ್ರತೆ ರಕ್ಷಿಸೋಣ
- ☆ ಸಾಮ್ರಾಜ್ಯವಾದಿಗಳ ಪಿತೂರಿಗೆ ಧಿಕ್ಕಾರ ಹೇಳೋಣ
- ☆ ದೇಶದ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯ ಚಿರಾಯುವಾಗಲಿ
- ☆ ಸಮಾಜವಾದ ಚಿರಾಯುವಾಗಲಿ
- ☆ ವಿಶ್ವ ಕಾರ್ಮಿಕರೆ ಒಂದಾಗಿ


ಎಲ್ಲರಿಗೂ ಮೇ ದಿನದ ಕೆಂಪು ವಂದನೆಗಳು

ಕರ್ನಾಟಕ

ಕೃಷಿ ಕಾರ್ಮಿಕ ಆತ್ಮಗೌರವದಿಂದ ಬದುಕುವಂತೆ ಮಾಡಿ

ವಿಧಾನಸಭೆಯಲ್ಲಿ ಕಾಂ. ಶ್ರೀರಾಮರೆಡ್ಡಿ ಆಗ್ರಹ

(ಕರ್ನಾಟಕ ವಿಧಾನಸಭೆಯಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದಲ್ಲಿ ಮಾತನಾಡುತ್ತಾ ಕಾಂ. ಶ್ರೀರಾಮರೆಡ್ಡಿಯವರು ಮುಂದಿಟ್ಟ ಅಂಶಗಳು)



ನಾವು ಒಟ್ಟಾರೆ ಕರ್ನಾಟಕ ರಾಜ್ಯದ ಪ್ರಗತಿಯನ್ನು ನೋಡಬೇಕಾದರೆ ಪ್ರಗತಿ ಆಗಬೇಕಾದರೆ ಅದಕ್ಕೆ ನಿರ್ದಿಷ್ಟವಾದ ಗುರಿ ಇದೆ. ಅದು ನಾಳೆಯೇ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಆ ಸ್ಪಷ್ಟ ಗುರಿಯೆಡೆಗೆ ದಿಟ್ಟವಾದ ಹೆಜ್ಜೆ ಇಟ್ಟರೆ ಮಾತ್ರ ಯಾವುದೇ ಒಂದು ಸರ್ಕಾರ ರಾಜ್ಯವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಕರ್ನಾಟಕದಲ್ಲಿ ಒಂದು ಕಡೆ ಕೈಗಾರಿಕಾ ಅಭಿವೃದ್ಧಿ ಆಗಬೇಕು ಇನ್ನೊಂದು ಕಡೆ ಕೃಷಿ ಅಭಿವೃದ್ಧಿ ಆಗಬೇಕು. ಕೃಷಿಯಲ್ಲಿ ಮುಖ್ಯವಾದ ಸಮಸ್ಯೆ ಕೃಷಿ ಕಾರ್ಮಿಕರು. ಅವರ ಪರಿಸ್ಥಿತಿ ಏನಾಗಿದೆ ಎಂದರೆ ದುಃಖವಾಗುತ್ತದೆ. ನಾವೆಲ್ಲರೂ ಅವರ ಬಗ್ಗೆ ಭಾಷಣ ಮಾಡಿದ್ದೇವೆ. ಅವರ ಬಗ್ಗೆ ಸಂತೃಪ್ತಿ ಪಟ್ಟುಕೊಳ್ಳುವುದೇನೆಂದರೆ ನಾವು ಅವರಿಗೆ ಮೀಸಲಾತಿ ಕೊಟ್ಟುಬಿಟ್ಟಿದ್ದೇವೆ. ಚುನಾವಣೆಯಲ್ಲಿ ರಿಸರ್ವೇಶನ್, ಶಿಕ್ಷಣದಲ್ಲಿ ರಿಜರ್ವೇಶನ್ ನಾನು ಖಂಡಿತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ಮೀಸಲಾತಿ ವಿರೋಧಿಯಲ್ಲ, ಆದರೆ ಈ ಮೀಸಲಾತಿಯಿಂದ ಅವರನ್ನು ನಾವು ಉದ್ಧಾರ ಮಾಡುತ್ತೇವೆ" ಎಂದು ಯಾರಾದರೂ ಅಂದುಕೊಂಡಿದ್ದರೆ ಅದು ಖಂಡಿತಾ ಸಾಧ್ಯವಿಲ್ಲ. ನಾವು 20 ವರ್ಷಗಳಿಂದ ನೋಡಿದ್ದೇವೆ. ಆದರೆ ಮೂಲಭೂತವಾಗಿ ಅವರಿಗೆ ಏನಾಗಬೇಕು ಅಂದರೆ ಅವರು ಆತ್ಮಗೌರವದಿಂದ ಹಳ್ಳಿಯಲ್ಲಿ ಇರಬೇಕಾದರೆ ಮೊದಲನೆಯದಾಗಿ ಅವರು ಸ್ವಂತ ಕಾಲ ಮೇಲೆ ಸ್ವಂತ ದುಡಿಮೆ ಮೇಲೆ ನಿಂತುಕೊಳ್ಳಬೇಕು. ಅದಕ್ಕೆ ಬೇಕಾದ ಅವಶ್ಯಕತೆ ಒದಗಿಸಿ. ಹಳ್ಳಿಗಾಡುಗಳಲ್ಲಿರುವವರಿಗೆ ಮೊದಲು ಭೂಮಿ ಕೊಡಿ. ಒಂದೊಂದು ಕುಟುಂಬಕ್ಕೆ ಎರಡು ಎಕರೆ ಭೂಮಿ ಕೊಡಿ ಮತ್ತು ಅದಕ್ಕೆ ನೀರಿನ ವ್ಯವಸ್ಥೆ ಮಾಡಿಕೊಡಿ ಇನ್ಯಾವುದೇ ಸಹಾಯ ಅವರಿಗೆ ಮಾಡಬೇಡಿ ಅವರಿಗೆ ಗೊತ್ತಿದೆ ಅವರು ಬದುಕುತ್ತಾರೆ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಜನ ದುಡಿಯುವಂತಹ ಜನ. ಇವತ್ತು ಆ ಕೃಷಿ ಕಾರ್ಮಿಕರಿಗೆ ಭೂಮಿ ಇಲ್ಲ, ಇನ್ನೊಂದು ಕಡೆ ಅವರು ಕೊಡುವಂತಹ ಕೂಲಿ ಪ್ರಶ್ನೆ. ಸರ್ಕಾರ ಕಾನೂನು ಮಾಡಿಬಿಟ್ಟಿದ್ದೇವೆ 11 ರೂ. ಎನ್ಆರ್ ನಲ್ಲಿ ಕೊಡುತ್ತೇವೆ, 26 ರೂ ಕಾನೂನು ಮಾಡಿರಬಹುದು. ಅದು ಖಂಡಿತ ಎಲ್ಲೂ ಜಾರಿಗೆ ಬಂದಿಲ್ಲ, ಬರಲೂ ಸಾಧ್ಯವಿಲ್ಲ, ಕಾರಣ ಇಷ್ಟೇ ಕೆಲವು ಒಣ ಬೇಸಾಯ ಇರುವ ಪ್ರದೇಶಗಳಲ್ಲಿ 26ರೂ ಕೂಲಿ ಕೊಟ್ಟರೆ ರೈತ ಸತ್ತು ಹೋಗುತ್ತಾನೆ. ಇನ್ನು ವಾಣಿಜ್ಯ ಬೆಳೆ ಬೆಳೆಯುವ ಕಡೆ 26 ರೂ. ಕೂಲಿಕೊಟ್ಟು ಬದುಕಲಿಕ್ಕೆ ಸಾಧ್ಯವಿಲ್ಲ, ಇವತ್ತು ನಾವೆಲ್ಲರೂ ಆತ್ಮಶೋಧನೆ ಮಾಡಿಕೊಳ್ಳಬೇಕಾಗಿದೆ. ಈ 26ರೂ. ಕೊಟ್ಟೆವಿ ಅಂತ ಇಟ್ಟುಕೊಳ್ಳಿ, ಅದರಿಂದ ಆ ಮನುಷ್ಯ ಬದುಕಲಿಕ್ಕೆ ಸಾಧ್ಯವಿದೆಯಾ? ಅವನ ಹೆಂಡತಿ ಮಕ್ಕಳು ಬದುಕಲು ಸಾಧ್ಯವಿದೆಯಾ? ಅವನು ಇವತ್ತು ಉಪಯೋಗಿಸುತ್ತಿರುವ ವಸ್ತುಗಳ ಬೆಲೆ ಏನಿದೆ? ಅಕ್ಕಿ, ಗೋಧಿ, ಸಕ್ಕರೆ ಬೆಲೆಗಳು ವಿಪರೀತವಾಗಿ ಏರುತ್ತಿರುವ ಸಂದರ್ಭದಲ್ಲಿ 26 ರೂ. 30 ರೂ. ನಾವು ಕನಿಷ್ಠ ಕೂಲಿ ನಿಗದಿ ಮಾಡಿದ್ದರೂ ಅದರಿಂದ ಅವನು ತನ್ನ ಹೆಂಡತಿ ಮಕ್ಕಳೊಡನೆ ಬದುಕಲಿಕ್ಕೆ ಸಾಧ್ಯವಿಲ್ಲ, ಎರಡು ಹೊತ್ತು ಊಟ ಮಾಡಲು ಮೈತುಂಬಾ ಬಟ್ಟೆ ಹಾಕಲು ಸಾಧ್ಯವಿಲ್ಲ, ಅಂತಹ ಪರಿಸ್ಥಿತಿಯಿಂದ ಅವನನ್ನು ನಾವು ತಪ್ಪಿಸಬೇಕಾಗಿದೆ ಅವರು ಇವತ್ತು ಏಕೆ ಸ್ವಾಭಿಮಾನ ಕಳೆದುಕೊಂಡಿದ್ದಾರೆ. ಏಕೆ ಇವತ್ತು ಅವರು ಮಾರಾಟದ ಸರಕುಗಳಾಗಿದ್ದಾರೆ. ಯಾಕೆ ಇವತ್ತು ಅವರು ಅವಹೇಳನಕ್ಕೆ ಗುರಿಯಾಗಿದ್ದಾರೆ? ಏಕೆಂದರೆ ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲ, ಆರ್ಥಿಕವಾಗಿ ತನ್ನ ಕಾಲಮೇಲೆ ನಿಂತು ಜೀವಿಸುವ ಶಕ್ತಿ ಇಲ್ಲ, ಅದಕ್ಕೋಸ್ಕರ ಇವತ್ತು ಹಳ್ಳಿಗಾಡುಗಳಲ್ಲಿರುವ ಜಮೀನುದಾರರ, ಬಡ್ಡಿ ವ್ಯಾಪಾರಿಗಳ ಮುಂದೆ ಕೈಕಟ್ಟಿ ತಲೆಬಾಗಿ ನಿಂತುಕೊಳ್ಳುವ ಪರಿಸ್ಥಿತಿ ಬಂದಿದೆ. ಹಳ್ಳಿಗಾಡು ಪ್ರದೇಶಗಳಲ್ಲಿ ಅವರ ವಿರೋಧ ಕಟ್ಟಿಕೊಂಡರೆ ಬದುಕಲಿಕ್ಕೆ ಸಾಧ್ಯವಿಲ್ಲ, ಎಲ್ಲದಕ್ಕೂ ಅವರ ಮೇಲೆ ಅವಲಂಬಿಸಬೇಕಾಗಿದೆ.

ಅದಕ್ಕೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನೀವು ಏನೆಲ್ಲ ಮಾಡಿದರೂ ಮೊಟ್ಟಮೊದಲು ಮಾಡಬೇಕಾಗಿರುವುದು ಉಳುವ ಕೃಷಿ ಕಾರ್ಮಿಕನಿಗೆ ಭೂಮಿ ಕೊಡಿ, ಅವನು ಕೃಷಿ ಮಾಡಲು ಬೇಕಾಗಿರುವ ಪ್ರಾಥಮಿಕ ವ್ಯವಸ್ಥೆ ಮಾಡಿಕೊಟ್ಟರೆ ಮಾತ್ರ ಆತ ಬದಕಲು ಸಾಧ್ಯವಾಗುತ್ತದೆ. ಆತ ಬದುಕಿದರೆ ಮಾತ್ರ ಈ ದೇಶದ ಕೃಷಿ ಬದುಕಲು ಸಾಧ್ಯವಾಗುತ್ತದೆ. ಅವನಿಲ್ಲದೆ ಕೃಷಿ ಬದುಕಲು ಸಾಧ್ಯವಿಲ್ಲ. ಕೃಷಿ ಉತ್ಪಾದನೆ ಹೆಚ್ಚಾಗಲಿಕ್ಕೆ ಸಾಧ್ಯವಿಲ್ಲ. 107 ಲಕ್ಷ ಹೆಕ್ಟೇರ್ ಭೂಮಿ ಕರ್ನಾಟಕದಲ್ಲಿ ಕೃಷಿ ಯೋಗ್ಯ ಭೂಮಿ ಇದೆ ಅದರಲ್ಲಿ ನೀವು ಹಂಚಿರುವುದು 1 ಲಕ್ಷ 25 ಸಾವಿರ ಎಕರೆ ಮಾತ್ರ. ಅದೂ 25 ಸಾವಿರ ಕುಟುಂಬಗಳಿಗೆ ಮಾತ್ರ. ಉಳಿದ ಕೃಷಿ ಯೋಗ್ಯ ಭೂಮಿ ಬಗ್ಗೆ ನಾನು ಕಳೆದ ಬಜೆಟ್ ನಲ್ಲಿ ಹೇಳಿದ್ದೇನೆ. ಅದನ್ನು ತೆಗೆದುನೋಡಿ. ಮತ್ತೆ ಪುನಾರಾವರ್ತನೆ ಮಾಡುವದಿಲ್ಲ. 107 ಲಕ್ಷ ಹೆಕ್ಟೇರ್ ಭೂಮಿಯನ್ನು ನೀವು ಹಂಚಬೇಕು ಅದನ್ನು ಹಂಚಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದನ್ನು ಹಂಚಿದರೆ ಮಾತ್ರ ಕೃಷಿಯಲ್ಲಿ ಉತ್ಪಾದನೆ ಜಾಸ್ತಿಯಾಗುತ್ತದೆ. ಇನ್ನೊಂದು ಕಡೆ ಆಧುನಿಕವಾಗಿ ಮನಷ್ಯನ ಬೆಳವಣಿಗೆ ಹೆಚ್ಚಿ ಆಗ ಆಂತರಿಕ ಮಾರುಕಟ್ಟೆ ಹೆಚ್ಚಾಗುತ್ತದೆ. ಏಕೆ ಕೈಗಾರಿಕೆಗಳು ಇವತ್ತು ರೋಗಗ್ರಸ್ತವಾಗಿದೆ. ಒಂದು ಕೈಗಾರಿಕೆಗಳಲ್ಲಿ ಉತ್ಪನ್ನವಾಗುವ ಸರಕುಗಳಿಗೆ ಮಾರುಕಟ್ಟೆ ಇಲ್ಲ, ಇನ್ನೊಂದು ಕಡೆ ಕೈಗಾರಿಕೆಗಳಲ್ಲಿ ಸರಕುಗಳ ಹೆಚ್ಚುವರಿ ಉತ್ಪಾದನೆಯಾಗುತ್ತಿದೆ. ಆದ್ದರಿಂದ ಇವತ್ತು ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಇನ್ನೊಂದು ಮಿಸ್ ಮ್ಯಾನೇಜ್‌ಮೆಂಟಿದೆ. ಅದರ ವಿವರ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಹಳಿದರೆ ದೊಡ್ಡ ಚರಿತ್ರೆಯಾಗುತ್ತದೆ. ನಮ್ಮ ಅಧ್ಯಕ್ಷರಿಗೂ ಗೊತ್ತಿದೆ. ಅವರು ಹಿಂದೆ ಯಾವುದೋ ಒಂದು ಕಮಿಟಿಯ ಅಧ್ಯಕ್ಷರಾಗಿದ್ದಾಗ ಅವರ ಅನುಭವ ಹೇಳಿದ್ದಾರೆ ನನಗೆ. ಸರ್ಕಾರಿ ಕಾರ್ಖಾನೆಗಳು ಹೇಗೆ ಏತಕ್ಕಾಗಿ ನಷ್ಟ ಅನುಭವಿಸುತ್ತವೆ ಎಂದು ಅಧ್ಯಕ್ಷರು ಅವಕಾಶ ಕೊಟ್ಟರೆ ಪಟ್ಟಿ ಬೇಕಾದರೆ ನಾನು ಕೊಡುತ್ತೇನೆ ಏತಕ್ಕಾಗಿ ಅವು ನಷ್ಟ ಅನುಭವಿಸುತ್ತಿವೆ ಎಂದು.

ಮೂಲಭೂತ ಸಮಸ್ಯೆ ಪರಿಹಾರ ಮಾಡಲಿಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು ನನಗೆ ಸ್ಪಷ್ಟವಾಗಿ ಗೊತ್ತಿದೆ. ಆದರೆ ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ತನ್ನ ಕರ್ತವ್ಯ ಮಾಡಬೇಕು. ಕೃಷಿ ಕಾರ್ಮಿಕರ ಕೃಷಿ ವೇತನ ಪ್ರಶ್ನೆಯನ್ನು 9ನೇ ಶೆಡ್ಯೂಲ್‌ಗೆ ಸೇರಿಸಲು ಏಕೆ ಕರ್ನಾಟಕ ಸರ್ಕಾರ ಒತ್ತಾಯ ಮಾಡಬಾರದು? ಭೂಮಿಯನ್ನು ಹಂಚಿಕೆ ಮಾಡುವ ಪ್ರಶ್ನೆಯನ್ನು 9ನೇ ಶೆಡ್ಯೂಲಿಗೆ ಸೇರಿಸುವಂತೆ ಏಕೆ ನಮ್ಮ ಸರ್ಕಾರ ಒತ್ತಾಯ ಮಾಡಬಾರದು? ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಇಷ್ಟಾದರೂ ಮಾಡಬಹುದಲ್ಲ, ವಿದ್ಯುತ್ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಅದು ಮಾಡಬಹುದಲ್ಲ. ರೈತರಿಗೆ ಒಳ್ಳೆ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡುವುದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಅದನ್ನು ಮಾಡಬಹುದಲ್ಲ.

‘ತಾನು ಕಳ್ಳ ಪರರನ್ನು ನಂಬ’ ಎಂಬಂತೆ ನಮ್ಮ ಬೂರ್ಜ್ವ ಪತ್ರಿಕೆಗಳು ತಮ್ಮ ವರ್ಗದ ಜನ ಕಳ್ಳರಾದರೆ ಬೇರೆಯ ವರ್ಗದವರೂ ಕಳ್ಳರೇ ಎನ್ನುವಂತೆ ಮಾತಾಡುತ್ತಾರೆ. ಪ. ಬಂಗಾಳದ ಎಡರಂಗ ಸರ್ಕಾರದ ನೀತಿಗಳನ್ನು ಉಳಿದ ಬೂರ್ಜ್ವ ಪಕ್ಷಗಳ ನೀತಿಗಳಂತೆ ಟೀಕಿಸುತ್ತಾರೆ. ಆದರೆ ಪ. ಬಂಗಾಳ ಸರ್ಕಾರ ಗುಣಾತ್ಮಕವಾಗಿ ಬೂರ್ಜ್ವ ಸರ್ಕಾರಿಗಳಿಗಿಂತ ಹೋಲಿಕೆಯಿಲ್ಲದಷ್ಟು ಉತ್ತಮವಾದದ್ದು ಎಂಬುದನ್ನು ಪ. ಬಂಗಾಳದ ಜನತೆ ಅರಿತು ಕೊಂಡಿದ್ದಾರೆ.

1995-96ನೇ ಸಾಲಿಗೆ ಅಲ್ಲಿನ ಅರ್ಥಮಂತ್ರಿ ಡಾ. ಅಶಿಮ್ ದಾಸ್ ಗುಪ್ತಾ ಮಂಡಿಸಿದ ಆಯವ್ಯಯ (ಬಜೆಟ್) ನೋಡಿದರೆ ಈ ಮಾತನ್ನು ಅರ್ಥಮಾಡಿಕೊಳ್ಳಲು ಸಹಾಯವಾದೀತು. ಬಜೆಟ್ ಭಾಷಣದ ಮುಖ್ಯಾಂಶಗಳನ್ನು ನೋಡೋಣ.

ಕೇಂದ್ರ ಸರ್ಕಾರದ ಜನವಿರೋಧಿ ಹೊಸ ನೀತಿಗೆ ಜನಪರವಾದ ಪರ್ಯಾಯ ಸಾಧ್ಯವಿಲ್ಲವೆ

ಸಭಾಧ್ಯಕ್ಷರೇ,

ನಾನು 1995-96ನೇ ಸಾಲಿನ ಆಯವ್ಯಯವನ್ನು ಮಂಡಿಸುತ್ತಿದ್ದೇನೆ. ರಾಜ್ಯದ ಈ ಬಜೆಟ್ ಪ್ರಸ್ತಾವಗಳು ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿ ಹೊಸ ಪರ್ಯಾಯವಾದ ನೀತಿಯ ಭಾಗವಾಗಿವೆ. ಬಹುತೇಕ ಜನಸಾಮಾನ್ಯರ ಪರವಾಗಿರುವ ಹೊಸ ಆರ್ಥಿಕ ನೀತಿಗೆ ಪರ್ಯಾಯ ನೀತಿಯನ್ನು ನಾವು ಹಲವು ಸಾರಿ ಕೇಂದ್ರ ಸರ್ಕಾರದ ಮುಂದೆ ಇರಿಸಿದ್ದೇವೆ. ಈ ಪರ್ಯಾಯ ನೀತಿ ರಾಷ್ಟ್ರ ಮಟ್ಟದಲ್ಲಿ ಅಳವಡಿಸಿಕೊಳ್ಳಬಹುದಾದಂತಹದ್ದು. ಈ ಒಟ್ಟಾರೆ ನೀತಿಯಲ್ಲಿ ರಾಜ್ಯಗಳ ಅಧಿಕಾರದ ಮಿತಿಯಲ್ಲಿ ಅನುಷ್ಠಾನಗೊಳಿಸಬಹುದಾದಂತಹದ್ದನ್ನು ನಾವು ಜಾರಿಗೆ ತರುತ್ತಿದ್ದೇವೆ.

ಅಂಕೆ ಸಂಖ್ಯೆಗಳನ್ನು ವಿಶ್ಲೇಷಿಸಿದರೆ ಐ.ಎಂ.ಎಫ್. ಮತ್ತು ಗ್ಯಾಟ್ ಷರತ್ತಗಳಿಗೆ ತಲೆಬಾಗಿ ಜಾರಿಗೆ ತಂದಿರುವ ಹೊಸ ಆರ್ಥಿಕ ನೀತಿ ವಿಶಾಲ ಜನಸಮೂಹದ ಹಿತಕ್ಕೆ ವಿರುದ್ಧವಾಗಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇನ್ನೂ ಆರ್ಥಿಕ ಹಿಂಜರಿತ ಮುಂದುವರಿದೇ ಇದೆ. ಅಭಿವೃದ್ಧಿ ಹೊಂದಿರುವ ಈ ದೇಶಗಳು ಮೂರನೇ ಜಗತ್ತಿನ ದೇಶಗಳಲ್ಲಿ ಮಾರುಕಟ್ಟೆಗಾಗಿ ಹುಡುಕುತ್ತಿವೆ. ಭಾರತ ಈ ಮೂರನೇ ಜಗತ್ತಿನ ದೇಶಗಳಲ್ಲಿ ಬಹಳ ದೊಡ್ಡದಾದದ್ದು ಮತ್ತು ಅವರಿಗೆ ಮುಖ್ಯವಾದದ್ದು. ಐ.ಎಂ.ಎಫ್ ನ ಮುಖ್ಯ ಷರತ್ತು ಆಮದು ಸುಂಕಗಳನ್ನೂ ತೆಗೆದು ಹಾಕಬೇಕೆಂಬುದು ಇದರಿಂದ ಆ ದೇಶಗಳ ಸರಕುಗಳು ಸುಲಭವಾಗಿ ಇಲ್ಲಿ ಮಾರಾಟವಾಗುತ್ತವೆ ಕೇಂದ್ರ ಸರ್ಕಾರದ ಬಜೆಟ್ಟಿನ ತಿರುಳೇ ಇದಾಗಿದೆ ಎಂಬುದನ್ನು ನಾವು ಗಮನಿಸಬೇಕು. ಇದರಿಂದಾಗಿ ಬಹುರಾಷ್ಟ್ರೀಯ ಕಂಪನಿಗಳ ಸ್ಪರ್ಧೆಯನ್ನು ಎದುರಿಸುವ ತಯಾರಿ ಮಾಡಿಕೊಳ್ಳಲು ಅಸಮರ್ಥವಾಗಿರುವ ಭಾರತೀಯ ಉದ್ದಿಮೆಗಳು ತತ್ತರಿಸತೊಡಗಿವೆ.

ಹೊಸ ಆರ್ಥಿಕ ನೀತಿಯ ನಾಲ್ಕು ವರ್ಷಗಳನ್ನು ಅದಕ್ಕೂ ಹಿಂದಿನ ನಾಲ್ಕು ವರ್ಷಗಳಿಗೆ ಹೋಲಿಸಿದರೆ ಈ ನಾಲ್ಕು ವರ್ಷಗಳಲ್ಲಿ ಬೆಳವಣಿಗೆಯ ವೇಗ ಕುಂಠಿತವಾಗಿರುವುದು ಗೊತ್ತಾಗುತ್ತದೆ. ಸರಾಸರಿ ವಾರ್ಷಿಕ ಒಟ್ಟು ಆಂತರಿಕ ಉತ್ಪಾದನೆಯ ಗತಿ ಶೇ. 6.7ರಷ್ಟಿದ್ದದ್ದು ಈಗ ಶೇ. 3.7ಕ್ಕೆ ಇಳಿದಿದೆ. ಹಾಗೆಯೇ ಆಹಾರ ಧಾನ್ಯಗಳ ಉತ್ಪಾದನೆಯ ಬೆಳವಣಿಗೆ ಹಿಂದಿನ ನಾಲ್ಕು ವರ್ಷಗಳಲ್ಲಿ 5.79 ರಷ್ಟಿದ್ದು ನಂತರದ ನಾಲ್ಕು ವರ್ಷಗಳಲ್ಲಿ ಶೇ. 1.7ಕ್ಕೆ ಇಳಿದಿದೆ. ಔದ್ಯಮಿಕ ಬೆಳವಣಿಗೆ ಶೇ. 8.6 ರಷ್ಟಿದ್ದದ್ದು ಈಗ ಶೇ. 3.00ಕ್ಕೆ ಇಳಿದಿದೆ. ಇದು ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ ಔದ್ಯಮಿಕ ಉತ್ಪಾದನೆಯನ್ನು ಕುಂಠಿತಗೊಳಿಸಿದೆ. ಒಂದು ನಿರ್ದಿಷ್ಟ ಉದಾಹರಣೆ ನೀಡುವುದಾದರೆ ಪ. ಬಂಗಾದಲ್ಲಿ ರೈಲ್ವೆ ವ್ಯಾಗನ್ನು ಉದ್ದಿಮೆಯಲ್ಲಿ ಉತ್ಪಾದನೆ ಶೇ. 28.5 ರಷ್ಟು ಕಡಿಮೆಯಾಗಿದೆ ಇದರಿಂದ ಸುಮಾರು ಒಂದೂವರೆ ಲಕ್ಷದಷ್ಟು ಜನ ನಿರುದ್ಯೋಗಿಗಳಾಗುತ್ತಾರೆ.

ನಿರುದ್ಯೋಗದ ಸಮಸ್ಯೆ ಎಲ್ಲಾ ರಾಜ್ಯಗಳಲ್ಲೂ ಗಂಭೀರವಾಗಿ ಹೋಗಿದೆ. ಈ ವರ್ಷದ ಆರ್ಥಿಕ ಸಮೀಕ್ಷೆ ಅಥವಾ ಬಜೆಟ್ಟು ದೇಶದಲ್ಲಿನ ಒಟ್ಟು ನಿರುದ್ಯೋಗದ ಬಗ್ಗೆ ಏನೂ ಹೇಳುವುದಿಲ್ಲ.

ಕಳೆದ ನಾಲ್ಕು ವರ್ಷಗಳಲ್ಲೂ ಉತ್ತಮ ಮಳೆಯಾಗಿದೆ. ಆದರೆ ಹಣದುಬ್ಬರ ಶೇ. 11ಕ್ಕೂ ಹೆಚ್ಚಾಗಿದೆ. ಕೇಂದ್ರ ಸರ್ಕಾರ ಇಂಥ ಸನ್ನಿವೇಶದಲ್ಲೂ ಹಣದುಬ್ಬರ ಇಳಿಸುವ ಯಾವುದೇ ಕ್ರಮ ಕೈಗೊಂಡಿಲ್ಲ. ಪಡಿತರ ವಿತರಣೆಯನ್ನು ಉತ್ತಮ ಪಡಿಸುವ ಪ್ರಯತ್ನದ ಗೋಜಿಗೂ ಕೇಂದ್ರ ಸರ್ಕಾರ ಹೋಗಿಲ್ಲ. 1994-95ರ ಆರ್ಥಿಕ ಸಮೀಕ್ಷೆಯ ಪ್ರಕಾರ ಪಡಿತರ ವಿತರಣೆಗೆ ಲಭ್ಯವಿರುವ ಆಹಾರ ಧಾನ್ಯದ ಪ್ರಮಾಣ 1991 ರಲ್ಲಿ 208 ಲಕ್ಷ ಟನ್ನುಗಳಿದ್ದದ್ದು 1994ರಲ್ಲಿ 141 ಲಕ್ಷ ಟನ್ನುಗಳಿಗೆ ಇಳಿದಿದೆ.

ಐ.ಎಂ.ಎಫ್. ಸಾಲ ಮತ್ತು ಗ್ಯಾಟ್ ಷರತ್ತುಗಳಿಂದಾಗಿ ವಿದೇಶೀ ಸರಕುಗಳು ಮತ್ತು ಬಂಡವಾಳ ನಿರಾತಂಕವಾಗಿ ದೇಶದೊಳಕ್ಕೆ ಬಂದಿವೆ. ನಮ್ಮ ಪೇಟೆಂಟ್ ಕಾನೂನುಗಳು, ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ರಂಗಗಳಲ್ಲೇ ವಿದೇಶೀ ಬಂಡವಾಳ ನುಸುಳಿದೆ. ಈ ರೀತಿ ಆರ್ಥಿಕದ ಎಲ್ಲ ಮುಖ್ಯ ರಂಗಗಳಲ್ಲಿ ವಿದೇಶಿಯರಿಗೆ ನುಸುಳಲು ಅವಕಾಶ ನೀಡಲಾಗಿದೆ. ಇದು ನಮ್ಮ ಸಾರ್ವಭೌಮತ್ವಕ್ಕೆ ಹೊಡೆತ ನೀಡುತ್ತಿದೆ.

ದೇಶದಲ್ಲಿ ಆಂತರಿಕ ಉಳಿತಾಯದ ಮಟ್ಟ ಶೇ. 23.7 ರಿಂದ ಶೇ. 20.2ಕ್ಕೆ ಇಳಿದಿದೆ. ದೊಡ್ಡ ಪ್ರಚಾರ ಮಾಡಿದರೂ ವಿದೇಶೀ ನೇರ ಹೂಡಿಕೆ ಬರೀ 0.3 ಶೇಕಡಾದಷ್ಟಕ್ಕೆ ಇಳಿದಿದೆ. ಇತರ ವಿದೇಶೀ ಹೂಡಿಕೆ ಬಹಳ ಅನಿಶ್ಚಿತ ಸ್ವಭಾವದ್ದು ಎನ್ನಲಾಗುತ್ತಿದೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಹೊಸ ಆರ್ಥಿಕ ನೀತಿ ಬಂದಾಗಿನಿಂದ ದೇಶದ ಜನಸಾಮಾನ್ಯರ ಸಮಸ್ಯೆಗಳು ಪರಿಹಾರವಾಗುವ ಬದಲು ಹೆಚ್ಚಾಗಿವೆ.

ಇಂತಹ ಪರಿಸ್ಥಿತಿಯಲ್ಲಿ ಎಂತಹ ನೀತಿಯನ್ನು ಸರ್ಕಾರ ಅನುಸರಿಸಬೇಕು? ನಾವು ಸ್ವಾವಲಂಬನೆಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎನ್ನುತ್ತೇವೆ. ಸ್ವಾವಲಂಬನೆ ಎಂದರೆ ವಿದೇಶಗಳೊಡನೆ ವ್ಯವಹಾರವನ್ನೇ ಬಿಡಬೇಕು ಎಂದಲ್ಲ. ಆದರ ಅರ್ಥ ಮೊದಲು ನಾವು ನಮ್ಮ ಜನತೆಯ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವತ್ತ ಗಮನ ಕೊಡಬೇಕು. ಇದಕ್ಕಾಗಿ ಆಂತರಿಕ ಉತ್ಪಾದನೆಯನ್ನು ಹೆಚ್ಚಿಸಬೇಕು. ನಮ್ಮಲ್ಲಿರುವ ಎಲ್ಲ ತರಹದ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ನ್ಯಾಶನಲ್ ಸ್ಯಾಂಪಲ್ ಸರ್ವೆ ಅಂಕೆ ಸಂಖ್ಯೆಗಳ ಪ್ರಕಾರ ನಮ್ಮ ಜನರ ಬಳಕೆಯ ಬೇಡಿಕೆಯ ಸುಮಾರು ಶೇ. 80ರಷ್ಟು ಆಹಾರ ಧಾನ್ಯ, ಬಟ್ಟೆ, ಔಷಧಿ ಇತ್ಯಾದಿಗಳಿಂದಲೇ ಆಗುತ್ತದೆ. ಇವುಗಳನ್ನು ನಮ್ಮ ಆಂತರಿಕ ಉತ್ಪಾದನೆಯಿಂದಲೇ ಸುಲಭ ಬೆಲೆಗಳಲ್ಲಿ ಪೂರೈಸಬಹುದು. ಇಂತಹ ಸ್ವಾವ

ಮಾಡುವ ಸಾಮರ್ಥ್ಯ ಹೆಚ್ಚುತ್ತದೆ.
ಇನ್ನೂ ಹಣ ಹೂಡಿಕೆ ವಿಷಯ
ರಿಕ ಉಳಿತಾಯದಿಂದ ಎಷ್ಟು ಹ
ಮಾಡಲು ಸಾಧ್ಯ ಎಂಬುದನ್ನೂ ನ
ಬೇಕು. ಪ್ರತಿವರ್ಷವೂ ಕೇಂದ್ರ ವರ
ತೆರಿಗೆ ತಪ್ಪಿಸುವುದರಿಂದ 50 ಸಾ
ಕೋಟಿಗಳಷ್ಟು ಕಪ್ಪು ಹಣ ದೇ
ಉತ್ಪನ್ನವಾಗುತ್ತದೆ. ಈ ಹಣವನ್ನು
ಗೆಳದರೆ ಅದೊಂದು ದೊಡ್ಡ ನಿಧಿ
ತ್ತದೆ. ಇವೆಲ್ಲ ಹಣವನ್ನು ಬಳಸಿ
ಮೇಲೆ ಯಾವುದೇ ಒಂದು ಕ್ಷೇ
ಇನ್ನೂ ಹಣ ಬೇಕಾಗಿದ್ದರೆ ಆಗ ವಿ
ಹೂಡಿಕೆಯನ್ನು ಪರಸ್ಪರರಿಗೆ ಲಾಭ
ವಂತಹ ಷರತ್ತುಗಳ ಮೇಲೆ ಆಹ್ವಾನಿ
ತಪ್ಪಿಲ್ಲ.
ಇನ್ನೂ ತಂತ್ರಜ್ಞಾನದ ವಿಷಯ
ಸಾರಾಸಗಟಾಗಿ ವಿದೇಶೀ ತಂತ್ರಜ್ಞಾ
ಮೇಲೆ ಅವಲಂಬಿಸುವ ಬದಲು
ಪರ್ಯಾಯ ನೀತಿಯಲ್ಲಿ ದೇಶೀ ತಂತ್ರ
ಮತ್ತು ಸಂಶೋಧನೆಯ ಮೇಲೆ
ನೀಡುತ್ತೇವೆ. ಸುಲಭವಾಗಿ ಇದು ಸಾ
ಗುವಲ್ಲೆಲ್ಲ ಇದನ್ನು ನಾವು ಸಾಧಿಸ
ನಿರ್ದಿಷ್ಟ ರಂಗಗಳಲ್ಲಿ ವಿದೇಶೀ ತಂತ್ರ
ಬಿಟ್ಟು ಬೇರೆ ಗತಿಯಿಲ್ಲ ಎನ್ನುವಲ್ಲಿ
ತಂತ್ರಜ್ಞಾನದ ಮೇರೆ ಹೋಗಬಹು
ನಮ್ಮ ಈ ಪರ್ಯಾಯ ನೀತಿ
ಕಪ್ಪು ಹಣ ಹೊರಗೆಳೆಯುವುದು
ಮುಖ್ಯ. ಇದರಿಂದ ದೇಶೀ ಉಳಿತಾ
ಪ್ರಮಾಣ ಏರಿಸುವುದರ ಜೊತೆಗೆ ಹ
ಬ್ಬರವನ್ನು ತಡೆಯಬಹುದು. ಜನರಿಗ
ಕೂಲವಾಗುವಂತಹ ಸಹಾಯಧನ
ನೆಯನ್ನು ಈ ಹಣದಿಂದ ನಾವು
ಕೊಳ್ಳಬಹುದು.
ನಮ್ಮ ಪರ್ಯಾಯ ನೀತಿಯ
ಮಾನ ಸ್ಪರ್ಧೆಯ ಬದಲು ಸಮಾನ
ನಾವು ಹೆಚ್ಚಿನ ಒತ್ತು ನೀಡುತ್ತೇವೆ.
ರಂಗದಲ್ಲಿ ಸಣ್ಣ ಕೈಗಾರಿಕೆಗಳಿಗೆ
ತರಹದ ಸೌಲಭ್ಯಗಳು ಸುಲಭವಾಗಿ
ವಾಗಬೇಕು. ಈ ದೃಷ್ಟಿಕೋನದಿಂದ
ರಾಷ್ಟ್ರೀಯ ಔದ್ಯಮಿಕ ನೀತಿಯ ದಿಸೆ
ಬದಲಾಯಿಸಬೇಕು. ಇದು ಕೇಂದ್ರ
ಮಾಡಿರುವಂತೆ ಕೆಲವು ಕ್ರಮಗಳ ಘೋ
ಮಾಡುವುದರಿಂದಷ್ಟೇ ಸಾಧಿತವಾಗು
ಒಂದೆಡೆ ವಿದೇಶೀ ಆಮದನ್ನು ಸರಳ
ಇನ್ನೊಂದೆಡೆ ಸಣ್ಣ ಕೈಗಾರಿಕೆಗಳನ್ನು
ಬಾರದೆವೆಂಬಂತೆ ಕಾಣುವುದರಿಂದ
ಸಾಧಿತವಾಗುವುದಿಲ್ಲ. ಇಲ್ಲಿ ವಾಸ್ತವ
ಜನಸಾಮಾನ್ಯರ ಬಹುತೇಕ ಅ

ಪ. ಬಂಗಾಳದ ಎಡರಂಗ ಸರ್ಕಾರದ ಬಜೆಟ್ಟಿಗೆ ಕರ್ನಾಟಕದ ಬಜೆಟ್ಟನ್ನು ಹೋಲಿಸಿದರೆ ಎಡರಂಗ ಸರ್ಕಾರದ ವೈಶಿಷ್ಟ್ಯತೆ, ಜನಪರ ಕಾಳಜಿ ನಿಚ್ಚಳವಾಗಿ ಕಾಣುತ್ತದೆ. ಕರ್ನಾಟಕದ ಬಜೆಟ್ಟಿನ ಬಗೆಗೆ ‘ಐಕ್ಯರಂಗ’ದ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಕಾಂಗ್ರೆಸ್ಸೇತರ ಸರ್ಕಾರ ವಿರುವ ಪ.ಬಂಗಾಳದ ಬಜೆಟ್ಟು ಜನ ಸಾಮಾನ್ಯರ ಮೇಲೆ ಹೆಚ್ಚಿನ ತೆರಿಗೆ ಹೇರಲಿಲ್ಲ, ಅದೇ ಸಮಯದಲ್ಲಿ ಬಜೆಟ್ ಕೊರತೆಯನ್ನು ಸಹ ಬಹಳ ಕಡಿಮೆ ಪ್ರಮಾಣದಲ್ಲಿರಿಸಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ವಿವಿಧ ಸಮಾಜ ಕಲ್ಯಾಣದ ಯೋಜನೆಗಳನ್ನೂ ಪ. ಬಂಗಾಳದ ಸರ್ಕಾರ ತಂದಿದೆ. ಜನಸಾಮಾನ್ಯ ಸುಧಾರಣೆಯ ಬಗ್ಗೆ ಮಾತೆತ್ತುವುದಿಲ್ಲ, ಬದಲಿಗೆ ಈಗಿರುವ ಭೂಸುಧಾರಣಾ ಕಾಯಿದೆಯಲ್ಲೇ ಹಲವು ರಿಯಾಯಿತಿಗಳನ್ನು ತೋರಿ ಉದ್ಯಮಿಗಳ ಮತ್ತು ಜಮೀನುದಾರರ ಅನುಕೂಲಕ್ಕೆ ತಕ್ಕಂತೆ ವರ್ತಿಸುವ ಸೂಚನೆಯನ್ನು ಸರ್ಕಾರ ನೀಡಿದೆ.

ಕರ್ನಾಟಕದ ಬಜೆಟ್ಟು

ಕರ್ನಾಟಕದ ಬಜೆಟ್ಟು ಕೇಂದ್ರದ ಹೊಸ ಆರ್ಥಿಕ ನೀತಿಯ ಪರಿಣಾಮಗಳ ಬಗ್ಗೆ ಕಟುವಾಗಿಯೇ ಟೀಕೆ ಮಾಡುತ್ತದೆ.

ಆದರೆ ಈ ಬಜೆಟ್ಟಿನಲ್ಲಿ ಯಾವುದೇ ಪರ್ಯಾಯ ನೀತಿಗಳ ಪ್ರಸ್ತಾವಗಳಿಲ್ಲ. ಯಾವ ನೀತಿಗಳನ್ನಾದರೂ ಟೀಕೆ ಮಾಡುವುದು ಸುಲಭ. ಆದರೆ ಅಂತಹ ಬೇಡದ ನೀತಿಯ ಬದಲಿಗೆ ಎಂತಹ ನೀತಿ ಇರಬೇಕು ಎನ್ನುವುದು ಹೊಸ ನೀತಿ ರೂಪಿಸುವುದು ಬಹಳ ಮುಖ್ಯ. ಇಲ್ಲೇ ಕರ್ನಾಟಕದ ಜನತಾದಳದ ಸರ್ಕಾರ ವಿಫಲವಾಗಿರುವುದು. ಅಂತಹ ಪರ್ಯಾಯ ನೀತಿಯಿಲ್ಲದೇ ಇರುವುದರಿಂದಲೇ ಈ ದೃಷ್ಟಿಕೋಣದಲ್ಲೂ ನ್ಯೂನತೆ ಇರುವುದು.

ಕರ್ನಾಟಕದ ಬಜೆಟ್ಟು ಸಹ ಭೂ ಸುಧಾರಣೆಯ ... ಜನಸಾಮಾನ್ಯರು ಬಳಸುವ ವಸ್ತುಗಳ ಮೇಲೆ ತೆರಿಗೆಗಳನ್ನು ಇಳಿಸಲಾಗಿದೆ. ಅದೇ ಸಮಯದಲ್ಲಿ ಭೋಗ ವಸ್ತುಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಲಾಗಿದೆ.

ಕರ್ನಾಟಕದ ಬಜೆಟ್ಟು ದೊಡ್ಡ ಪ್ರಮಾಣದಲ್ಲಿ ತೆರಿಗೆಗಳನ್ನು ಹೇರಿದೆ. ಈ ತೆರಿಗೆಗಳು ಮಧ್ಯಮ ಮತ್ತು ಶ್ರೀಮಂತ ವರ್ಗಗಳು ಬಳಸುವ ವಸ್ತುಗಳ ಮೇಲೆ ಹೇರಿದಂತೆ ಕಂಡರೂ ಇದು ಕೊನೆಗೆ ಬಡವರ ಹೆಗಲಿಗೇ ಬರುವ ಸಾಧ್ಯತೆ ಹೆಚ್ಚು. ನೇರವಾಗಿ ಶ್ರೀಮಂತರ ಮೇಲೆ ತೆರಿಗೆ ಹೇರಿದರೆ ಮಾತ್ರ ಬಡವರಿಗೆ ಅದರ ನೋವು ತಟ್ಟದಿರಲು ಸಾಧ್ಯ.

ಕರ್ನಾಟಕದ ಬಜೆಟ್ಟು ಸಹ ಭೂ

ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಕೃಷಿ ಉತ್ಪಾದನೆ ಸ್ಥಗಿತಗೊಂಡಿದೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಕೃಷಿ ಉತ್ಪಾದನೆ ಹೆಚ್ಚಿಸಲು ಇರುವ ಮೂಲ ಮಂತ್ರವೇ ಭೂ ಸುಧಾರಣೆ. ಆದರೆ ಇದು ಸರ್ಕಾರಕ್ಕೆ ಬೇಕಾಗಿಲ್ಲ.

ಒಟ್ಟಾರೆಯಾಗಿ ಈ ಎರಡು ಬಜೆಟ್ಟುಗಳನ್ನು ಹೋಲಿಸಿದರೆ ಜನತಾದಳ ಬಜೆಟ್ಟು ಶ್ರೀಮಂತ ವರ್ಗಗಳ ಪರವಾಗೇ ಇರುವುದು ಗೊತ್ತಾಗುತ್ತದೆ.

ಪ. ಬಂಗಾಳ ಎಡರಂಗದ ಯಶಸ್ಸಿನ ಗುಟ್ಟು ಈಗ ಸ್ಪಷ್ಟವಲ್ಲವೆ? ಇದಕ್ಕಲ್ಲದೆ ಇನ್ನೇತಕ್ಕೆ ಜನ ಎಡರಂಗ ಸರ್ಕಾರದ ಹಿಂದೆ ನಿಂತಿರುವುದು?

ಲಂಬನೆ ಕಾರ್ಯಕ್ರ
ಅಲ್ಪ ಸ್ವಲ್ಪ ವಿದ
ವ್ಯವಹಾರದ ಅವ
ಕಂಡು ಬಂದರೆ ಅ
ತರಲು ಅವಶ್ಯಕ ಕ್ರ
ಳನ್ನು ತೆಗೆದುಕೊ
ಹುದು. ಇದು ಹ
ಆರ್ಥಿಕ ನೀತಿಗಿಂತ
ಯಾಗಿರುತ್ತದೆ. ಯ
ದರೆ ಇಲ್ಲಿ ವಿದ
ರಂಗಗಳಲ್ಲಿ ಮಹತ್ತ್ರ
ಶೀಯರ ಪಾತ್ರ
ತ್ತದೆ. ಇಂತಹ ವಿ
ದಿಂದ ನಮ್ಮ ಚ

ಸಮರ್ಥವಾಗಿ ಮತ್ತು ಸುಲಭ
ಲ್ಲಿ ಸಣ್ಣ ಕೈಗಾರಿಕೆಗಳಿಂದಲೇ ಪೂರೈ
ಮ. ಇದನ್ನು ಗಮನದಲ್ಲಿರಿಸಿಕೊಂಡು
ದನೆಯಲ್ಲಿ ದೊಡ್ಡ ಮತ್ತು ಸಣ್ಣ
ಗಳ ಪಾತ್ರದ ಸಮನ್ವಯತೆ ಸಾಧಿ.
ಆಗ ಉತ್ತಮ ಸ್ಪರ್ಧಾತ್ಮಕತೆ ಕಡಿಮೆ
ಹೆಚ್ಚು ಉದ್ಯೋಗ ಸೃಷ್ಟಿ ಇವೆಲ್ಲ
ವಾಗುತ್ತವೆ.

ರಂಗದಲ್ಲಿ ಸಮಾನ ಸ್ಪರ್ಧೆಗೆ
ಒಂದು ಅರ್ಥವಿರಲು ಸಾಧ್ಯ. ಅದು
...ಕರಣೆ. ಆದರೆ ಹೊಸ ಆರ್ಥಿಕ
ಂದ ನಂತರ ಕೇಂದ್ರ ಬಜೆಟ್ಟುಗಳಲ್ಲಿ
ಸುಧಾರಣೆಯ ಪ್ರಸ್ತಾಪವೇ ಇಲ್ಲ.

...ದ್ರದ ಹೊಸ ಆರ್ಥಿಕ ನೀತಿಗೆ
...ಯ ನೀತಿ ಪ್ರತಿಪಾದಿಸಿದ ಮೇಲೆ
ನಮ್ಮ ರಾಜ್ಯಕ್ಕೂ ಅಳವಡಿಸಿಕೊಳ್ಳ
ಆದರೆ ನಮ್ಮ ಫೆಡರಲ್ ಸಂವಿಧಾನ
...ಜ್ಯಗಳಿಗೆ ಬಹಳ ಸೀಮಿತ ಅಧಿಕಾ.
ಈ ಸೀಮಿತ ಅಧಿಕಾರಗಳ ಮಿತಿ
...ತುವೆ ರಾಜ್ಯದಲ್ಲಿ ಏನೇನು ಮಾಡ
...ಆದನ್ನು ಮಾಡುತ್ತಿದ್ದೇವೆ. ರಾಜ್ಯದ
...ನ್ನು ಈ ದೃಷ್ಟಿಕೋನದಿಂದಲೇ ಮಂಡಿ.
...ನೆ ಇಲ್ಲಿ ಮುಖ್ಯ ಉದ್ದೇಶ ಉದ್ಯೋ.
ಹೆಚ್ಚಿಸುವುದು ಜೊತೆಗೇ ಔದ್ಯ
...ತ್ತು ಕೃಷಿ ಉತ್ಪಾದನೆಗಳನ್ನು ಹೆಚ್ಚಿ
..., ಹೆಚ್ಚೆಚ್ಚು ವಿಕೇಂದ್ರೀಕರಣ ಸಾಧಿಸಿ
...ಲಕ ಜನ ಸಾಮಾನ್ಯರ ಹಿತ
...ವುದು.

ಬಂಗಾಳ ಬಗೆಗೆ ಕೆಲವು ಮಾಹಿತಿ
...ನೋಡೋಣ. ನ್ಯಾಶನಲ್ ಸ್ಯಾಂಪಲ್
ಪ್ರಕಾರ ರಾಷ್ಟ್ರ ಮಟ್ಟದಲ್ಲಿ ಒಟ್ಟು
...ಯ ಶೇ. 29 ರಷ್ಟನ್ನು ಸಣ್ಣ ಮತ್ತು
...ಣ್ಣ ರೈತರು ಹೊಂದಿದ್ದರೆ. ಪ.
...ದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ
...0ರಷ್ಟು ಭೂಮಿ ಹೊಂದಿದ್ದಾರೆ.
...ರ ಅಂಕೆ-ಸಂಖ್ಯೆಗಳ ಪ್ರಕಾರ ಭೂಮಿ
...ಯಿಂದ 22 ಲಕ್ಷ ರೈತರಿಗೆ ಲಾಭವಾ.
...ವರಲ್ಲಿ ಶೇ. 59ರಷ್ಟು ಪ. ಜಾತಿ ಪ.
...ಗೆ ಸೇರಿದವರು.

ಸುಧಾರಣೆಯ ಜೊತೆಗೇ ಇತರ
...ಕಾರ್ಯಗಳನ್ನು ನಾವು ಮಾಡಿ.
...ಒಟ್ಟು ಸಾಗುವಳಿ ಭೂಮಿಯ ಶೇ.
ಹೆಚ್ಚು ಭಾಗಕ್ಕೆ ನೀರಾವರಿ ಒದಗಿ
...ಮಗೆ ಸಾಧ್ಯವಾಗಿದೆ. ಈ ಎಲ್ಲ
...ಂದಾಗಿಯೇ ನಾವು ದೇಶದ ಉಳಿ.
...ಜ್ಯಗಳಿಗಿಂತ ಹೆಚ್ಚು ಪ್ರಮಾಣದ
...ತ್ಪಾದನೆ ಸಾಧಿಸಲು ಸಾಧ್ಯವಾಗಿದೆ.

	ದೇಶದ ಸರಾಸರಿ 1980-83ರಿಂದ	ಪ.ಬಂಗಾಳ 1990-93ರ
...ಅವಧಿಯಲ್ಲಿನ ಆಹಾರ ಧಾನ್ಯಗಳ • ...ಬೆಳವಣಿಗೆ	ಶೇ. 2.80	ಶೇ. 5.90
...ಪ್ರತಿ ಹೆಕ್ಟೇರಿಗೆ ಉತ್ಪಾದಕತೆಯ ...ಹೆಚ್ಚಳ	ಶೇ. 3.20	ಶೇ. 5.50
...ಎಣ್ಣೆಕಾಳು ಉತ್ಪಾದನೆಯಲ್ಲಿ ಹೆಚ್ಚಳ	ಶೇ. 6.8	ಶೇ.12.20

(...ಹಾರ ಧಾನ್ಯಗಳ ಉತ್ಪಾದನೆಯಲ್ಲಿ ರಾಜ್ಯ ಸ್ವಾವಲಂಬನೆ ಸಾಧಿಸಿದೆ ಎಂದರೆ ತಪ್ಪಾಗದು. ಅಂದರೆ ...ವಶ್ಯಕತೆ ಪೂರೈಸಿಕೊಳ್ಳುವಷ್ಟು ಆಹಾರ ಧಾನ್ಯಗಳನ್ನು ನಾವು ಬೆಳೆಯುತ್ತೇವೆ)

...ಅಂಕೆ ಸಂಖ್ಯೆಯನ್ನು ಗಮ.
...ನೋಡಿ)

...ಉತ್ಪಾದನೆಯಲ್ಲೂ ರಾಜ್ಯ
...ರಾಜ್ಯಗಳಿಗಿಂತ ಮುಂದಿದೆ. ಅರಣ್ಯ
...ಪ್ರಮಾಣ ಎಂಭತ್ತರ ದಶಕದಲ್ಲಿ
....38 ರಷ್ಟಿದ್ದದ್ದು ಈಗ ಶೇ.
...ಏರಿದೆ.

...ಲ್ಲದೆ ರಾಜ್ಯದಲ್ಲಿ ದಿನಗೂಲಿ
...ರಲ್ಲಿ 18.82ರೂ.ಗಳಿದ್ದದ್ದು ಈಗ
...ರೂ.ಗಳಿಗೇರಿದೆ.

...ಕ ಕ್ಷೇತ್ರದಲ್ಲಿ ಹೊಸ ಸಾಧ್ಯತೆ
...ದುಕೊಂಡಿವೆ. ನಮ್ಮಲ್ಲಿ ಕೃಷಿಯ
...ಭೂ-ಸುಧಾರಣೆಯ ತಳಹ

ದಿಯ ಮೇಲೆ ಆದ್ದರಿಂದ ಅದು 'ಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಿದೆ. ಇದಲ್ಲದೆ ಕೃಷಿ ಸಂಸ್ಕರಣ ಉದ್ದಿಮೆಗಳಿಗೂ ದೊಡ್ಡ ಪ್ರಮಾಣದಲ್ಲಿ ಅವಕಾಶಗಳನ್ನು ತೆರೆದುಕೊಂಡಿವೆ. ರಾಜ್ಯದ ಮುಖ್ಯ ಸಂಪನ್ಮೂಲಗಳಾದ ಉಕ್ಕು ಮತ್ತು ಕಲ್ಲಿದ್ದಲಿನ ಸಾಗಾಣಿಕಾ ದರ ಸಮಾನೀಕರಣ ತೆಗೆದ ಮೇಲೆ ರಾಜ್ಯಕ್ಕೆ ಹೆಚ್ಚು ಅನುಕೂಲಕರ ಸ್ಥಿತಿ ಉಂಟಾಗಿದೆ. ರಾಜ್ಯದಲ್ಲಿ ವಿದ್ಯುತ್ ಪರಿಸ್ಥಿತಿಯೂ ಉತ್ತಮವಾಗಿದೆ. ಆದ್ದರಿಂದಲೇ ಒಟ್ಟಾರೆ ಔದ್ಯಮಿಕ ಉತ್ಪಾದನೆಯ ಸೂಚ್ಯಂಕ ಶೇ. 4.2ರಿಂದ ಶೇ. 5.5 ಕ್ಕೆ ಏರಿದೆ.

ಈ ಮೇಲಿನವುಗಳನ್ನು ಗಮನದಲ್ಲಿಟ್ಟುಕೊಂಡು 1995-96ರ ಬಜೆಟ್ಟು ಗ್ರಾಮೀಣ ವಿದ್ಯುದೀಕರಣ, ನೀರಾವರಿಗಳನ್ನು ಉತ್ತಮಪಡಿಸುವ ಯೋಜನೆಯನ್ನು ಒಳಗೊಂಡಿದೆ.

ಸಾಕ್ಷರತಾ ಕಾರ್ಯಕ್ರಮಗಳಿಗೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ನೆರವು ನೀಡಲಾಗುತ್ತದೆ. ಈ ಕ್ಷೇತ್ರಗಳಲ್ಲಿ ಈವರೆವಿಗೆ ಆಗಿರುವ ಸಾಧನೆಯೂ ಬಹಳ ದೊಡ್ಡದು.

ಕೇಂದ್ರ ಸರ್ಕಾರ ಹಣಕಾಸಿನ ನೆರವನ್ನು ನೀಡದೇ ಹೋದರೂ ರಾಜ್ಯ ಸರ್ಕಾರ ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಶ್ರಮಪಟ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ.

ಒಟ್ಟಾರೆಯಾಗಿ ಪ. ಬಂಗಾಳ ಸರ್ಕಾರ ಹಿಂದಿನ ವರ್ಷದಲ್ಲಿ ಅಂದರೆ 1994-95ರಲ್ಲಿ ಬಜೆಟ್ಟಿನಲ್ಲಿ 10 ಕೋಟಿ ರೂಪಾಯಿಗಳ ಕೊರತೆ ತೋರಿತ್ತು. ಆದರೆ ರಾಜ್ಯದ ಹಣಕಾಸಿನ ಉತ್ತಮ ನಿರ್ವಹಣೆಯಿಂದಾಗಿ ಈ ಕೊರತೆ ವಾಸ್ತವದಲ್ಲಿ ಬರಲೇ ಇಲ್ಲ. ಈ ವರ್ಷದ ಬಜೆಟ್ಟಿನಲ್ಲಿ ಹಲವು ರಿಯಾಯಿತಿಗಳನ್ನು ನೀಡಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಬರೀ 18 ಕೋಟಿ ರೂಪಾಯಿಗಳ ಕೊರತೆ ತೋರಿದೆ. ಈ ಕೊರತೆಯ ನಿಜದಲ್ಲಿ ಉಂಟಾಗದಂತೆ ನೋಡಿಕೊಳ್ಳುವ ಪ್ರಯತ್ನ ಮಾಡುವ ಭರವಸೆಯನ್ನು ಹಣಕಾಸು ಮಂತ್ರಿಗಳು ನೀಡಿದ್ದಾರೆ.

ಬಜೆಟ್ಟಿನ ಮುಖ್ಯಾಂಶಗಳು

1. ಪ್ರವೇಶ ತೆರಿಗೆಯನ್ನು ತೆಗೆದು ಹಾಕಲಾಗಿದೆ. ಇದು ಬಹುತೇಕ ಸರಕುಗಳ ಸಾಗಾಣಿಕೆಗೆ ತೊಂದರೆಯುಂಟು ಮಾಡುತ್ತಿತ್ತು. ಆದರೆ ನಗರ ಸಭೆಗಳಂತಹ ಸ್ಥಳೀಯ ಸಂಸ್ಥೆಗಳಿಗೆ ಈ ತೆರಿಗೆಯೇ ಮುಖ್ಯಸಂಪನ್ಮೂಲ ಅವುಗಳಿಗೆ ಈ ತೆರಿಗೆ ರದ್ದತಿಯಿಂದ ಆಗುವ ಹಾನಿ ಭರಿಸಿಕೊಡಲು ಸರ್ಕಾರ ಮಾರಾಟ ತೆರಿಗೆಯ ಮೇಲೆ ಸರ್ಚಾರ್ಜನ್ನು ವಿಧಿಸಿದೆ. ಇದು ಬಹಳ ಪ್ರಮಾಣದ್ದೇನೂ ಆಗಿರುವುದಿಲ್ಲ.
   ಈ ಕ್ರಮದಿಂದ ನಗರಸಭೆಗಳಿಗೂ ನಷ್ಟವಿಲ್ಲ, ಉದ್ಯಮಗಳಿಗೆ ಬಹಳ ಅನುಕೂಲವಾಗುತ್ತದೆ.
2. ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಸಾಲ ನೀಡಿ ಪ್ರೋತ್ಸಾಹಿಸುವ ಹೊಸ ಯೋಜನೆ
3. ಸಣ್ಣ ಕೈಗಾರಿಕೆಗಳ ಉತ್ಪನ್ನಗಳನ್ನು ರೈಸನ್ ವ್ಯವಸ್ಥೆಯ ಮೂಲಕ ಮಾರಾಟ ಮಾಡುವ ಹೊಸ ಯೋಜನೆ
4. ಒಂದು ಸಾವಿರ ಹೊಸ ಪ್ರಾಥಮಿಕ ಶಾಲೆಗಳ ಪ್ರಾರಂಭಕ್ಕೆ ಅವಕಾಶ
5. ರಸ್ತೆಗಳ ದುರಸ್ತಿ ಮತ್ತು ನಿರ್ಮಾಣ
6. ಕಲ್ಕತ್ತೆಗೆ 'ಮೆಗಾಸಿಟಿ ಯೋಜನೆ' ಎಂಬ ಎಂಟು ವರ್ಷಗಳ 1600 ಕೋಟಿರೂಪಾಯಿಗಳ ಯೋಜನೆ.
7. ನಿವೃತ್ತಿ ಹೊಂದುವ ಶಿಕ್ಷಕರಿಗೆ ಕಾಗದ ಪತ್ರಗಳು ಇಲ್ಲದೆ ನಿವೃತ್ತಿ ವೇತನ ಸಿಗುವಲ್ಲಿ ವಿಳಂಬವಾಗುತ್ತದೆ. ಈಗ ಈ ಅವಧಿಯಲ್ಲಿ ಅವರಿಗೆ ಮಾಸಿಕ 1000 ರೂಪಾಯಿಗಳು ದೊರೆಯುವಂತೆ ಕ್ರಮ.
8. ಭೂ ರಹಿತ ಕೃಷಿ ಕೂಲಿಕಾರರಿಗೆ ಭವಿಷ್ಯ ನಿಧಿ ಸ್ಥಾಪನೆ. ಕೂಲಿಕಾರರು ಅಲ್ಪ ಪ್ರಮಾಣದಲ್ಲಿ ಉಳಿತಾಯ ಮಾಡಿ ಈ ನಿಧಿಗೆ ನೀಡಿದರೆ ಸರ್ಕಾರ ಅಷ್ಟೇ ಮೊತ್ತವನ್ನು ನೀಡುತ್ತದೆ. ಇದು ಬೇರಲ್ಲೂ ಇಲ್ಲದ ಉದೊತ್ತನ ಯೋಜನೆ.
9. ತೆರಿಗೆ ಹೇರುವಾಗ ಕೆಳಕಂಡ ಉದ್ದೇಶಗಳನ್ನು ಹೊಂದಲಾಗಿದೆ.
   a) ತೆರಿಗೆ ಪದ್ಧತಿ ಸರಳೀಕರಣ
   b) ಹೊಸ ಔದ್ಯಮೀಕರಣಕ್ಕೆ ತೆರಿಗೆ ರಿಯಾಯಿತಿ, ಪ್ರೋತ್ಸಾಹ ಧನಗಳ ಮೂಲಕ ವಿಶೇಷ ಪ್ರೋತ್ಸಾಹ
   c) ಕೃಷಿ ಉತ್ಪಾದನೆ ಇನ್ನೂ ಹೆಚ್ಚಿಸುವುದು ಮತ್ತು
   d) ಭೋಗ ವಸ್ತುಗಳ ಮೇಲೆ ಹೆಚ್ಚೆಚ್ಚು ತೆರಿಗೆ

ಹೀಗೆ ಪ. ಬಂಗಾಳದ ಬಜೆಟ್ಟು ವಿ.ಸಿ.ಪಿ., ವಿ.ಸಿ.ಆರ್. ರೆಫ್ರಿಜರೇಟರ್, ಹವಾನಿಯಂತ್ರಣ ಯಂತ್ರಗಳ, ವಾಶಿಂಗ್ ಮೇಶಿನ್, ವಿದೇಶೀ ಮದ್ಯ, ಅಲಂಕಾರ ಸಾಮಗ್ರಿಗಳ ಇತ್ಯಾದಿ ಭೋಗ ವಸ್ತುಗಳ ಮೇಲೆ ಹಾಗೂ ತಂಬಾಕು, ಸಿಗರೇಟಿನಂತ ಹಾನಿಕಾರಕ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ ಸಂಪನ್ಮೂಲ ಸಂಗ್ರಹಣೆ ಮಾಡಿ, ಗ್ರಾಮೀಣ ಭೂರಹಿತ ರೈತ, ರೈತ ಕಾರ್ಮಿಕರಿಗೆ ವಿಶೇಷ ಯೋಜನೆಗಳನ್ನು ರೂಪಿಸಿ, ಉತ್ಪಾದನೆ ಔದ್ಯಮೀಕರಣ ಮತ್ತು ಔದ್ಯಮಿಕ ಉತ್ಪಾದನೆಗಳಿಗೆ ಪ್ರೋತ್ಸಾಹ ನೀಡುವಂತಹ ಕ್ರಮ ಕೈಗೊಂಡು ಒಟ್ಟಾರೆಯಾಗಿ ಬಡವರ ಜನಸಾಮಾನ್ಯರ ಪರವಾದ ನಿಲುವನ್ನು ಪ್ರತಿಪಾದಿಸಿದೆ.

ಬೆನ್ನು ಬಿಡದ ಭೂತ ಎನ್ರೋನ್



ಸರ್ಕಾರ ವಿದ್ಯುತ್ ವಲಯವನ್ನು ಉದಾರೀಕರಿಸಿ ವಿದೇಶೀ ಕಂಪೆನಿಗಳಿಗೆ ಪ್ರತಿಫಲದ ಭರವಸೆ ನೀಡಿದ್ದು ಎಲ್ಲರಿಗೂ ಗೊತ್ತಿರುವ ವಿಷಯ ತಾನೆ? ಉದಾರೀಕರಣದ ಲಾಭ ಪಡೆಯಲು ಅಮೇರಿಕದ ಎನ್ರೋನ್ ಎಂಬ ದೈತ್ಯ ವಿದ್ಯುತ್ ಕಂಪನಿ ಭಾರತಕ್ಕೆ ಬಂದು ಮಹಾರಾಷ್ಟ್ರದ ದಾಬೋಲ್‌ನಲ್ಲಿ ಒಂದು ವಿದ್ಯುತ್ ಘಟಕ ಸ್ಥಾಪಿಸುತ್ತಿದೆ. ನಿಗದಿತ ಪ್ರತಿಫಲದ ಭರವಸೆ ಇರುವುದರಿಂದ ಅತಿ ಹೆಚ್ಚು ಲಾಭ ಪಡೆಯಲು ಯೋಜನಾ ವೆಚ್ಚವನ್ನು ಸುಳ್ಳು ಸುಳ್ಳೇ ಅತಿಶಯಗೊಳಿಸಿ ಅದು ದೊಡ್ಡ ಹಗರಣವಾಗಿ ಕುಳಿತಿದೆ ಈಗ.

ಮಹಾರಾಷ್ಟ್ರದಲ್ಲಿ ವಿಧಾನಸಭೆಯ ಚುನಾವಣೆಗಳ ನಂತರ ಕಾಂಗ್ರೆಸ್ ಸರ್ಕಾರ ಹೋಗಿ ಬಿಜೆಪಿ-ಶಿವಸೇನೆ ಸರ್ಕಾರ ಬಂದ ನಂತರ ಹೊಸ ಸರ್ಕಾರ ಎನ್ರೋನ್‌ನ ಯೋಜನೆಯ ಹಗರಣ ಪರಿಶೀಲಿಸುವ ಮಾತುಗಳನ್ನು ಆಡಿದ್ದರು. ಇದರ ಬಿಸಿ ತಟ್ಟಿದ ಕೂಡಲೇ ಎನ್ರೋನ್‌ನ ಉನ್ನತ ಅಧಿಕಾರಿಗಳು ಬಿಜೆಪಿಯೊಂದಿಗೆ ಲಾಬಿ ಮಾಡಲು (ಒತ್ತಡ ತರಲು) ಆಗಲೇ ನವದೆಹಲಿಗೆ ಬಂದಿದ್ದಾರಂತೆ. ಆಗಲೇ ಶತಾಯಗತಾಯ ಪ್ರಯತ್ನಗಳನ್ನು ಮಾಡುತ್ತಿರುವ ಈ ತಂಡವನ್ನು ಬಿಜೆಪಿಯ ಅಧ್ಯಕ್ಷರು ಭೇಟಿಯಾಗಲಿಲ್ಲ ಎಂಬ ಸುದ್ದಿ ಬಂದಿದೆ. ಇರಲಿ.

ಉದಾರೀಕರಣದ ವಿಷಯದಲ್ಲಿ ಬಿಜೆಪಿ ಕಾಂಗ್ರೆಗಿಂತ ಭಿನ್ನವಲ್ಲ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಿರುವ ವಿಷಯ. ಆದರೆ ಎನ್ರೋನ್ ಹಗರಣದ ಲಾಭ ಪಡೆವ ವಿಚಾರ ಬಿಜೆಪಿಗೆ ಬಂದಿರಬೇಕು.

ಅದು ಹೇಗೆ ಇರಲಿ ಇಲ್ಲಿ ನಾವು ಗಮನಿಸಬೇಕಾದದ್ದು ಇದು. ಎನ್ರೋನ್ ನಂತಹ ಕಂಪನಿ ಹಗರಣಗಳನ್ನು ನಡೆಸಿಯೂ ಮತ್ತೆ ತಾನು ಪ್ರಾಮಾಣಿಕ ಎಂಬ ಸೋಗು ಹಾಕುತ್ತಾ ಲಾಭಿ ಮಾಡುವ ಭಂಡತನವನ್ನು ತೋರುತ್ತದೆ. ಇದೇ ಬಹುರಾಷ್ಟ್ರೀಯ ಕಂಪೆನಿಯ ಮಹತ್ವ ಅಲ್ಲವೇ?

ಸರ್ಕಾರ-ಖಾಸಗಿ ರಂಗ ಬಾಂಧವ್ಯ: ಕಾಜಿ ನ್ಯಾಯ

ಈ ಕಾಜಿ ಮಹಾಶಯರು ಕಥೆಯಲ್ಲಿ ಬರುವ ಖಾಜಿಯಲ್ಲ, ಇವರು ವಿಶ್ವ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಗೌತಮ್ ಕಾಜಿ ಮೊಟ್ಟ ಮೊದಲ ಬಾರಿಗೆ ಭಾರತೀಯ ಸಂಜಾತ ರೊಬ್ಬರು ವಿಶ್ವ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಅವರ ಬಾರತ ಭೇಟಿ ಕೇಳಬೇಕೆ. ಭಾರತ ಸರ್ಕಾರದ ಧಣಿಯಾದ ವಿಶ್ವ ಬ್ಯಾಂಕ್ ತಾನು ನೀಡುವ ಸಾಲಗಳ ಮೂಲಕವೇ ಷರತ್ತುಗಳನ್ನು ಹೇರಿ ಭಾರತ ಸಾಮ್ರಾಜ್ಯಶಾಹಿಗಳ ಲಾಭಕ್ಕೆ ಮಾರುಕಟ್ಟೆಯಾಗಿ ಇರುವಂತೆ ನೋಡಿಕೊಳ್ಳುತ್ತದೆ.

ಸುಧಾರಣಾ ಚಳುವಳಿಗೆ ಚುರುಕು ನೀಡಲು ಅಗತ್ಯವಾದಷ್ಟು ಸಹಕಾರ ಭಾರತ ಸರ್ಕಾರ ಮತ್ತು ಖಾಸಗಿ ವಲಯದ ನಡುವೆ ಇಲ್ಲ ಎಂಬುದು ಅವರ ಅತೃಪ್ತಿ. ದೂರಸಂಪರ್ಕ, ಬಂದರು, ರಸ್ತೆ ಮುಂತಾದವನ್ನು ನಿರ್ಮಿಸುವಲ್ಲಿ ಸರ್ಕಾರ ನೇರವಾಗಿ ಭಾಗವಹಿಸುತ್ತಿಲ್ಲ ಎಂಬುದು ಅವರಿಗೆ ಆಶ್ಚರ್ಯದ ಸಂಗತಿಯಂತೆ.

ಕೊರಿಯಾ ಮತ್ತು ಜಪಾನ್‌ನ ಉದಾಹರಣೆಗಳನ್ನು ನೀಡುತ್ತ ಅವರು ಆರ್ಥಿಕ ಮಾದರಿಗಳನ್ನು ನಿರ್ಮಿಸುವುದಕ್ಕಿಂತ ಖಾಸಗಿ ವಲಯ ಮತ್ತು ಸರ್ಕಾರದ ಬಾಂಧವ್ಯ ಮುಖ್ಯ ಎಂದು ವಿವರಣೆ ನೀಡಿದ್ದಾರೆ. ಸರ್ಕಾರ ಮತ್ತು ಖಾಸಗಿ ವಲಯ ಪರಸ್ಪರ ಶತ್ರುಗಳಂತೆ ನೋಡಬಾರದಂತೆ.

ವಿಶ್ವ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಈ ರೀತಿಯ ಮಾತುಗಳನ್ನು ಕೇಳಿ ಇದರಲ್ಲೇನು ತಪ್ಪು. ಸರಿಯಾಗಿಯೇ ಹೇಳಿದ್ದಾರಲ್ಲ' ಎನ್ನಬೇಡಿ. ಈ ಮಾತುಗಳ ಆಳಕ್ಕೆ ಇಳಿದು ನೋಡಿದರೆ ಅವುಗಳ ಒಳಾರ್ಥ ತಿಳಿಯುತ್ತದೆ. ಸರ್ಕಾರ ಖಾಸಗಿಯವರ ಅಭಿವೃದ್ಧಿಗೆ ಬೇಕಾಗುವ ಅಂತರ್ರಚನೆಗಳಾದ ರಸ್ತೆ ಇತ್ಯಾದಿಗಳಲ್ಲಿ ಹಣಹಾಕಬೇಕು. ಖಾಸಗಿಯವರಿಗೆ ಬರೀ ಉದ್ದಿಮೆಗಳನ್ನು ಸ್ಥಾಪಿಸಿ ಲಾಭ ಹೊಡೆಯುವ ಕೆಲಸ ನೀಡಬೇಕು ಎಂಬುದೇ ಈ ಮಾತಿನ ಅರ್ಥ.

ಈ ಮಾತುಗಳನ್ನು ಬಹಳ ಚೆನ್ನಾಗೇ ಆಡಿದ್ದಾರೆ ಅಲ್ಲವೇ?

'ಬಡವರ ಬತ್ತಿ ಸ್ಟೋವ್ ಮೇಲೆ ಸುಂಕ

ಬಜೆಟ್ ತೋರಿದ ನಿರ್ಲಕ್ಷ್ಯ ಇದು. ಹಾಗೆ ಉದಾರೀಕರಣ ಬಂದ ಮೇಲೆ ಬಜೆಟ್‌ಗಳು ಬಡವರ ವಿರುದ್ಧವಾಗೇ ಇದೆ. ಅದರಲ್ಲೇನೂ ಸಂಶಯಬೇಡ. ಆದರೆ ಮೇಲುನೋಟಕ್ಕೆ ನೋಡಲಾರದರೂ ಬಡವರು ಉಪಯೋಗಿಸುವ ವಸ್ತುಗಳ ಮೇಲೆ ತೆರಿಗೆ ಸುಂಕಗಳ ಕಡಿಮೆ ಇರುತ್ತವೆ. ಪರೋಕ್ಷವಾಗಿ ಬಡವರ ಮೇಲೆ ತೆರಿಗೆ, ಸುಂಕಗಳ ಹೊರೆ ಹೆಚ್ಚು ಎಂಬುದು ಬೇರೆ ಮಾತು.

ಈ ಸಾರಿಯ ಬಜೆಟ್ಟಿನಲ್ಲಿ ಸೀಮೆ ಎಣ್ಣೆ ಬಳಸುವ ಬತ್ತಿ ಸ್ಟೋವ್‌ಗಳ ಮೇಲೆ ಶೇ. 15 ರಷ್ಟು ಅಬಕಾರಿ ಸುಂಕ ಹಾಕಲಾಗಿದೆ. ಬತ್ತಿ ಸೋವ್‌ಗಳನ್ನು ಜನಸಾಮಾನ್ಯರೇ ಬಳಸುವುದು. ಟಿ.ವಿ. ವಿ.ಸಿ.ಪಿ.ಗಳಂತಹ ಭೋಗ ವಸ್ತುಗಳ ಬೆಲೆ ಕಡಿಮೆ ಮಾಡಿದ ಬಜೆಟ್ ಈ ಬಡವರ ಬಳಕೆಯ ವಸ್ತುವಿನ ಮೇಲೆ ಹೆಚ್ಚಿನ ಸುಂಕ ಹೇರಿದೆ.

ಕಣ್ತಪ್ಪಿನಿಂದ ಆದ ತಪ್ಪೇ? ಅಥವಾ ಒತ್ತಡ ಹೇರಲು ಯಾರೂ ಇರಲಿಲ್ಲವೆ ಮನಮೋಹನ ಸಿಂಗರೆ?

ಮತ್ತೊಂದು ನಿರುದ್ಯೋಗ ಯೋಜನೆ

'ರಾಷ್ಟ್ರೀಯ ಪುನರುಜ್ಜೀವನ ನಿಧಿ' ಎಂಬ ನಿಧಿಯನ್ನು ನಮ್ಮ ಉದಾರೀಕರಣದ ಸರ್ಕಾರ ಸ್ಥಾಪಿಸಿ ಬಹಳ ದಿನಗಳೇ ಆಗಿವೆ. ಉದಾರೀಕರಣದಿಂದ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಉದ್ಯೋಗ ಕಳೆದುಕೊಳ್ಳುವವರಿಗೆ ಪುನಃ ಉದ್ಯೋಗ ದೊರಕಿಸಿಕೊಡಲು ತರಪೇತು ಗೊಳಿಸಲು ಮತ್ತು ಪರಿಹಾರ ನೀಡಲು ಈ ನಿಧಿ ಬಳಸುತ್ತೇವೆಂಬುದು ಸರ್ಕಾರದ ಹೇಳಿಕೆ. ಆದರೆ ವಾಸ್ತವದಲ್ಲಿ ಇದು ನಿರುದ್ಯೋಗದ ಯೋಜನೆ. ಉದಾರೀಕರಣದಿಂದ ನಿರುದ್ಯೋಗ ಖಚಿತವಾಗಿ ಉಂಟಾಗುತ್ತದೆ. ಆಗ ಈ ನಿರುದ್ಯೋಗಿಗಳನ್ನು ಬಾಯಿ ಮುಚ್ಚಿಸಬೇಕೆಂಬುದೇ ಈ ನಿಧಿ ಸ್ಥಾಪನೆಯ ಉದ್ದೇಶ.

ಆದರೆ ದುಡಿವ ವರ್ಗ ಸತತವಾಗಿ ತೀವ್ರ ಹೋರಾಟ ಮಾಡುತ್ತಲೇ ಬಂದಿರುವುದರಿಂದ ಸರ್ಕಾರ ತಾನಂದುಕೊಂಡಿರುವುದನ್ನೆಲ್ಲ ಮಾಡುವುದು ಸಾಧ್ಯವಾಗುತ್ತಿಲ್ಲ. ಅವರು ಯೋಜಿಸಿದ ಪ್ರಮಾಣದಲ್ಲಿ ದುಡಿವ ಜನರನ್ನು ಮನೆಗೆ ಕಳುಹಿಸಿಲೂ ಆಗಿಲ್ಲ. ಆದರೆ ಹಿಂಬಾಗಿಲನಿಂದ ಈ ಕೆಲಸವನ್ನು ಬಹುಮಟ್ಟಿಗೆ ಸರ್ಕಾರ ಸಾಧಿಸಿದೆ.

ಈಗ ವಿಶ್ವ ಬ್ಯಾಂಕ್ ಮತ್ತು ಐ.ಎಫ್.ಸಿ. ಇನೆರಡೂ ಸೇರಿ ಖಾಸಗಿ ವಲಯಕ್ಕೊಂದು ಪರ್ಯಾಯ ರಾಷ್ಟ್ರೀಯ ಪುನರುಜ್ಜೀವನ ನಿಧಿ ಸ್ಥಾಪಿಸಲು ಮುಂದೆ ಬಂದಿವೆ.

ಖಂಡಿತವಾಗಿಯೂ ಈ ಯೋಜನೆಯ ಜೊತೆಗೆ ಹಲವು ಷರತ್ತುಗಳೂ ಬರುತ್ತವೆ. ದುಡಿವ ಜನರನ್ನು ಹೇಳದೇ ಕೇಳದೇ ಒಮ್ಮೆಲೇ ಮನೆಗೆ ಕಳುಹಿಸಲು ಖಾಸಗಿಯವರಿಗೆ ಅಧಿಕಾರ ನೀಡಬೇಕೆಂಬ ಷರತ್ತು ಎಲ್ಲಕ್ಕಿಂತ ಮೊದಲು ಇರುತ್ತವೆ.

ಮತ್ತೆ ದುಡಿವ ಜನ ಒಗ್ಗಟ್ಟಾಗಿ ಟೊಂಕ ಕಟ್ಟಿ ನಿಲ್ಲಲ್ಲೇ ಬೇಕು ಅಲ್ಲವೆ

15ನೇ ಮಹಾಧಿವೇಶನದಲ್ಲಿ ಚರ್ಚೆಗೊಳಗಾದ ಪ್ರಮುಖ ವಿಷಯಗಳು

ಮಹಾಧಿವೇಶನದಲ್ಲಿ ರಾಜಕೀಯ ನಿರ್ಣಯ ಹಾಗೂ ರಾಜಕೀಯ ಸಂಘಟನಾ ವರದಿ ತೀವ್ರ ಚರ್ಚೆಗೊಳಗಾಯಿತು. ಕೆಲವು ಸಣ್ಣ ತಿದ್ದುಪಡಿಗಳೊಂದಿಗೆ ಮಹಾಧಿವೇಶನ ಈ ಎರಡು ನಿರ್ಣಯಗಳನ್ನು ಅವಿರೋಧವಾಗಿ ಅಂಗೀಕರಿಸಿತು. ನಿರ್ಣಯದ ಮುಖ್ಯ ಧೋರಣೆ ಬಗ್ಗೆ ಯಾವುದೇ ತಿದ್ದುಪಡಿ ಬರದ್ದು ಪಕ್ಷದ ರಾಜಕೀಯ ಐಕ್ಯತೆಗೆ ನಿದರ್ಶನವಾಗಿತ್ತು. ಕೆಲವು ಪ್ರಮುಖ ವಿಷಯಗಳನ್ನು ಪ್ರತಿನಿಧಿಗಳು ಆಳವಾಗಿ ದೀರ್ಘವಾಗಿ ಚರ್ಚಿಸಿದರು. ಈ ರೀತಿ ಚರ್ಚೆಗೊಳಗಾದ ವಿಚಾರಗಳನ್ನು, ಚರ್ಚೆಯ ಸಾರವನ್ನು ಈ ಕೆಳಗೆ ಕೊಡಲಾಗಿದೆ. ಇದನ್ನು ಕಾಂ. ಹರ್ಕಿಷನ್ ಸಿಂಗ್ ಸುರ್ಜಿತ್ ಪಿ.ಡಿ. (ಏಪ್ರಿಲ್ 16 ಸಂಚಿಕೆ) ಯಲ್ಲಿ ಬರೆದ ಲೇಖನವೊಂದರಿಂದ ಆರಿಸಲಾಗಿದೆ.

ಸೋವಿಯೆತ್ ಸಮಾಜವಾದ ಕಳಚಿ ಬಿದ್ದದ್ದಕ್ಕೆ ಕಾರಣಗಳೇನು?

ರಾಜಕೀಯ ವರದಿಯ ಅಂತರ್ರಾಷ್ಟ್ರೀಯ ವಿಭಾಗದಲ್ಲಿ ಅತ್ಯಂತ ಹೆಚ್ಚು ಚರ್ಚೆಗೊಳಗಾದ ವಿಚಾರವೆಂದರೆ ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದದ ಹಿಂಜರಿತ ಹಾಗೂ ಕಳಚಿ ಬೀಳುವುದಕ್ಕೆ ಕಾರಣಗಳು. ಸೋವಿಯೆತ್ ಒಕ್ಕೂಟದ ವಿಘಟನೆ ಹಾಗೂ ಸಮಾಜವಾದ ಕಳಚಿ ಬೀಳುವುದಕ್ಕೆ ಕಾರಣಗಳ ಬಗ್ಗೆ ಇನ್ನೂ ಹೆಚ್ಚಿನ ಆಳವಾದ ಅಧ್ಯಯನದ ಭರವಸೆ ಈಡೇರಿಲ್ಲ ಎಂದ ಬಹಳಷ್ಟು ಪ್ರತಿನಿಧಿಗಳು ತಮ್ಮ ಚರ್ಚೆಯಲ್ಲಿ ಎತ್ತಿ ತೋರಿಸಿದರು. 14ನೇ ಮಹಾಧಿವೇಶನ ಅಂಗೀಕರಿಸಿದ ಸೈದ್ಧಾಂತಿಕ ನಿರ್ಣಯದ ಈ ಬಗ್ಗೆ ಮಾರ್ಗದರ್ಶನ ಸೂತ್ರಗಳನ್ನು ಕೊಟ್ಟಿದೆ. ಆದರೆ ಇದು ಸಾಲದು ಎಂದು ಅವರು ಆಳವಾದ ಅಧ್ಯಯನ, ತಿಳುವಳಿಕೆ ಈ ಬಗ್ಗೆ ಅಗತ್ಯ ಎಂದು ಒತ್ತಿ ಹೇಳಿದರು.

ಸಮಾಜವಾದದ ವಿಘಟನೆಗೆ ಕಾರಣವಾದ ಸೋವಿಯೆತ್ ಹಾಗೂ ಇತರ ಪೂರ್ವ ಯುರೋಪಿನ ಕಮ್ಯುನಿಸ್ಟ್ ಪಕ್ಷಗಳು ಮಾಡಿದ ಹಲವಾರು ಸೈದ್ಧಾಂತಿಕ ತಪ್ಪುಗಳು ನಮ್ಮನ್ನು ದಾರಿತಪ್ಪಿಸಿವೆಯೇ ಎಂದು ಹಲವಾರು ಪ್ರತಿನಿಧಿಗಳು ಪ್ರಶ್ನಿಸಿದರು. ಇಂತಹ ದಾರಿತಪ್ಪಿಸಿದ ಅಂಶಗಳ ಬಗ್ಗೆ ಆಳವಾದ ತಿಳುವಳಿ ರೂಪಿಸಬೇಕು ಎಂದು ಪ್ರತಿನಿಧಿಗಳು ಒತ್ತಾಯಿಸಿದರು. ಭಾರತದ ಪ್ರಭುತ್ವದ ಬಗ್ಗೆ ಈ ಪಕ್ಷಗಳ ತಿಳುವಳಿಕೆಯನ್ನು ನಾವು ವಿಮರ್ಶಾತ್ಮಕವಾಗಿ ಪ್ರಶ್ನಿಸಿ, ಇದರಿಂದ ದಾರಿ ತಪ್ಪುವ ಅಪಾಯದಿಂದ ಪಾರಾಗಿದ್ದೇವೆ. ಆದರೆ ಇತರ ಹಲವು ವಿಷಯಗಳ ಬಗ್ಗೆ ಈ ಪಕ್ಷಗಳ ಧೋರಣೆಗಳಿಂದ ದಾರಿ ತಪ್ಪಿದ್ದೇವೆ ಎಂದು ಹೊರಹೊಮ್ಮಿತು. 14ನೇ ಮಹಾಧಿವೇಶನ ಸೈದ್ಧಾಂತಿಕ ನಿರ್ಣಯದಲ್ಲಿ ಹೇಳಿದಂತೆ ಬಂಡವಾಳಶಾಹಿಯನ್ನು ಭೌತಿಕ ಉತ್ಪಾದನೆಯಲ್ಲಿ ಸಮಾಜವಾದ ಮೀರಿಸುತ್ತದೆ ಎಂಬ 1960ರ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನ ಹೇಳಿಕೆ ನಮ್ಮನ್ನು ದಾರಿ ತಪ್ಪಿಸಿತ್ತು. ಇತರ ಇಂತಹ ವಿಷಯಗಳ ಬಗ್ಗೆ ಆಳವಾದ ಅಧ್ಯಯನ ತಿಳುವಳಿಕೆ ರೂಪಿಸಬೇಕಾಗಿದೆ.

ಕೇರಳದಲ್ಲಿ ಅಲ್ಪಸಂಖ್ಯಾತರ ಕೋಮುವಾದದ ವಿರುದ್ಧ ಹೋರಾಡುವ ಬಗೆ ಹೇಗೆ?

ಈ ಪ್ರಶ್ನೆ ಸಂಘಟನಾ ಸಮೀಕ್ಷೆ ವರದಿಯಲ್ಲಿ ಚರ್ಚೆಗೊಳಗಾದ ಪ್ರಮುಖ ವಿಚಾರ. ಐ.ಯು.ಎಂ.ಎಲ್. ವಿಭಾಗವಾಗಿ ಹೊಸದಾಗಿ ರಚನೆಯಾದ ಐ.ಎನ್.ಎಲ್. ಹಾಗೂ ಮದಾನಿ ಪಾರ್ಟಿ ಬಗ್ಗೆ ಪಕ್ಷದ ಧೋರಣೆ ಬಗ್ಗೆ ತೀವ್ರ ಚರ್ಚೆ ನಡೆಯಿತು. ಈ ಪಕ್ಷಗಳು ರಾತ್ರೋರಾತ್ರಿ ಜಾತ್ಯಾತೀತ ಪಕ್ಷಗಳಾಗಿವೆ. ಆದ್ದರಿಂದ ಅವುಗಳ ಜತೆ ಸಹಕರಿಬೇಕು ಎಂದು ಪಕ್ಷದ ಕೆಲವರು ವಾದಿಸಿದ್ದು ಹಾಗೂ ಕೇಂದ್ರ ಸಮಿತಿ ಈ ನಿಲುವನ್ನು ನಿರಾಕರಿಸಿದ್ದು -ಮಹಾಧಿವೇಶನದಲ್ಲಿ ಚರ್ಚೆಯ ವಿಷಯವಾಯಿತು. ಹೆಚ್ಚಿನ ಪ್ರತಿನಿಧಿಗಳು ಕೇಂದ್ರ ಸಮಿತಿಯ ನಿಲುವನ್ನು ಸಮರ್ಥಿಸಿದರು. ಈ ಹೊಸ ಪಕ್ಷಗಳು ತಮ್ಮ ಜಾತ್ಯಾತೀತ ನಿಲುವನ್ನು ಇನ್ನೂ ಸಿದ್ಧಪಡಿಸಬೇಕಾಗಿದೆ. ಈ ಪಕ್ಷಗಳು ಜಾತ್ಯಾತೀತ ಹೌದೋ ಅಲ್ಲವೋ ಎಂದು ನಿರ್ಧರಿಸುವುದು ಜನತೆ. ಅಲ್ಪಸಂಖ್ಯಾತರ ಮನಗೆಲ್ಲಲು, ಈ ಪಕ್ಷಗಳ ಜತೆ ಸಹಕರಿಸಬೇಕು ಎಂದು ನಿಲುವು ತಪ್ಪು. ಎಡಪಕ್ಷಗಳು ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಮುಂದಿವೆ ಎಂದು ಅಲ್ಪಸಂಖ್ಯಾತ ಜನಸಮೂಹವನ್ನು ನೇರವಾಗಿ ಸಂಪರ್ಕಿಸಿ ತಿಳಿ ಹೇಳುವುದು ಸರಿಯಾದ ಮಾರ್ಗ. ಬಹುಸಂಖ್ಯಾತ ಕೋಮುವಾದದ ಅಪಾಯ ಹಾಗೂ ಅದರ ವಿರುದ್ಧ ಹೋರಾಟ ತೀವ್ರವಾಗಿರುವಾಗ ಅಲ್ಪಸಂಖ್ಯಾತ ಕೋಮುವಾದದ ಜತೆ ಶಾಮೀಲಾಗುವುದು ಅಪಾಯಕಾರಿ. ಕೇರಳ ಘಟಕ ಈ ಬಗ್ಗೆ ಎಚ್ಚರ ವಹಿಸಬೇಕು ಎಂಬ ಧೋರಣೆ ಪ್ರಧಾನವಾಗಿ ವ್ಯಕ್ತವಾಯಿತು.

ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಕೈಗಾರಿಕಾ ನೀತಿ ಸಹ ಚರ್ಚೆಗೆ ಒಳಗಾಗಿ, ಕೇಂದ್ರ ಸಮಿತಿಯ ನಿಲುವಿಗೆ ಬೆಂಬಲ ವ್ಯಕ್ತವಾಯಿತು.

ಯಾರು ಪ್ರಮುಖ ವೈರಿ -ಬಿ.ಜೆ.ಪಿ. ಅಥವಾ ಕಾಂಗ್ರೆ?

ಇದು ತೀವ್ರ ಚರ್ಚೆಗೊಳಗಾದ ಇನ್ನೊಂದು ವಿಚಾರ. ರಾಜಕೀಯ ನಿರ್ಣಯದಲ್ಲಿ ಹೇಳಿದಂತೆ ಕಾಂಗ್ರೆ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ, ಆದರೆ ಈ ಎರಡೂ ಹೋರಾಟಗಳನ್ನು ಒಟ್ಟಿಗೆ ಸಂಘಟಿಸುವುದಕ್ಕೆ ಭಾರೀ ಸಂಘಟನಾ ಶಕ್ತಿಯನ್ನು ಕ್ರೋಢೀಕರಿಸಬೇಕಾಗುತ್ತದೆ. ಇದಕ್ಕೆ ಎಡ ಹಾಗೂ ಜಾತ್ಯಾತೀತ ಶಕ್ತಿಗಳ ಮೈತ್ರಿಕೂಟ ಸಂಘಟಿಸಬೇಕು. ಜಾತ್ಯಾತೀತ ಶಕ್ತಿಗಳ ಬಲಹೀನತೆ, ಸಾಮಾಜಿಕ ನ್ಯಾಯ ಆರ್ಥಿಕ ಉದಾರೀಕರಣದ ಬಗ್ಗೆ ಸೈದ್ಧಾಂತಿಕ ಅಸ್ಪಷ್ಟತೆಯ ಹಿನ್ನೆಲೆಯಲ್ಲಿ ತಂತ್ರಗಳೇನು ಇರಬೇಕು ಎಂಬ ಬಗ್ಗೆ ಚರ್ಚೆ ಕೇಂದ್ರೀಕೃತವಾಗಿತ್ತು. ಕಾಂಗ್ರೆ ಅಥವಾ ಬಿಜೆಪಿ ಮುಖ್ಯ ಶತ್ರುವೇ ಎಂಬುದಕ್ಕೆ ಉತ್ತರ ಎರಡೂ ಸಮಾನ ಶತ್ರುಗಳು ಎಂಬುದೇ. ಆದರೆ ನಿರ್ದಿಷ್ಟ ಸಂದರ್ಭದಲ್ಲಿ ಯಾವುದು ಪ್ರಧಾನವಾಗಿ ಹೊಮ್ಮುತ್ತವೆ ಎಂಬುದನ್ನು ಅನುಸರಿಸಿ ತಂತ್ರವನ್ನು ಸಂದರ್ಭದಲ್ಲಿ ನಿರ್ಧರಿಸಬೇಕಾಗುತ್ತದೆ. ಜಾತ್ಯಾತೀತ ಶಕ್ತಿಗಳಿಗೆ ಕನಿಷ್ಠ ಕಾರ್ಯಕ್ರಮ ಆಧಾರಿತ ನೀತಿ ಅಂಗೀಕರಿಸಲು ಒತ್ತಾಯ ಹೇರುತ್ತಾ ಒಂದು ಚುನಾವಣಾ ಬದಲಿ ರೂಪಿಸಬೇಕು ಎಂಬ ಕೇಂದ್ರ ಸಮಿತಿಯ ನಿಲುವಿಗೆ ಬೆಂಬಲ ವ್ಯಕ್ತವಾಯಿತು.


ಕೇರಳ, ಪಶ್ಚಿಮ ಬಂಗಾಳದಲ್ಲಿ ಗುಂಪುಗಾರಿಕೆ ಹಾಗೂ ಬೂರ್ಜ್ವ ವಿಕೃತಿಗಳು.

ಕೇರಳ ಹಾಗೂ ಪಶ್ಚಿಮ ಬಂಗಾಳದ ಪಕ್ಷದ ಘಟಕಗಳಲ್ಲಿ ಕೆಲವು ಸದಸ್ಯರಲ್ಲಿ ಆರಂಭವಾಗಿರುವ ಬೂರ್ಜ್ವಾ ವಿಕೃತಿಗಳು ಹಾಗೂ ಗುಂಪುಗಾರಿಕೆ ಸಂಘಟನಾ ನಿರ್ಣಯದ ಬಗ್ಗೆ ಚರ್ಚೆಯಲ್ಲಿ ಎದ್ದು ಬರುವ ಪ್ರಮುಖ ವಿಚಾರ. ಈ ಎರಡು ರಾಜ್ಯಗಳಲ್ಲಿ ಹಲವಾರು ಹಂತಗಳಲ್ಲಿ ಸರ್ಕಾರಿ ಹುದ್ದೆಗಳಿಗೆ ಪಕ್ಷ ಸ್ಪರ್ಧಿಸಿ ಸತತವಾಗಿ ಗೆಲ್ಲುತ್ತಿದ್ದು, ಕೆಲವು ಸಂಗಾತಿಗಳು ಈ ಹುದ್ದೆಗಳು ಜೀವನಪರ್ಯಂತ ತಮ್ಮದೇ ಎಂಬ ಧೋರಣೆ ಅನುಸರಿಸುತ್ತಿದ್ದಾರೆ. ಈ ಹುದ್ದೆಗಳು ಪಕ್ಷದ ಚಟುವಟಿಕೆ, ಹಾಗೂ ವರ್ಗ ಹೋರಾಟದ ಭಾಗವಾಗಿ ಕಾಣುವ ನಿಲುವಿನಲ್ಲಿ ಸಡಿಲತೆ ತೋರುತ್ತದೆ. ಈ ಹುದ್ದೆಗಳಲ್ಲಿದ್ದರೆ ಆರಾಮವಾಗಿ ಜೀವನ ಮಾಡಬಹುದು ಎಂಬ ಧೋರಣೆ ಅನುಸರಿಸುತ್ತಾರೆ. ಪಕ್ಷ ಹಲವು ಸದಸ್ಯರಲ್ಲಿ ಭ್ರಷ್ಟಾಚಾರದ ಆಪಾದನೆ ಎದುರಿಸಬೇಕಾಗಿ ಬಂದಿದ್ದು ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ಈ ವಿಕೃತಗಳ ಬಗ್ಗೆ ಪಕ್ಷ ತೀವ್ರ ಕೈಗೊಳ್ಳಬೇಕೆಂದು ಹಲವು ಪ್ರತಿನಿಧಿಗಳು ಒತ್ತಾಯಿಸಿದರು. ಕೇರಳದಲ್ಲಿ ಹಾಗೂ ಸ್ವಲ್ಪ ಮಟ್ಟಿಗೆ ಪಶ್ಚಿಮ ಬಂಗಾಳದಲ್ಲಿ ಸಹ ಗುಂಪುಗಾರಿಕೆ ತಲೆದೋರಿರುವುದರ ಅಪಾಯ ಹಲವು ಪ್ರತಿನಿಧಿಗಳು ಬೊಟ್ಟು ಮಾಡಿ ಹೇಳಿದರು. ಗುಂಪುಗಾರಿಕೆಯಲ್ಲಿ ತೊಡಗುವುದಕ್ಕೆ ಯಾವುದೇ ಅವಕಾಶ ಕೊಡಬಾರದು. ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಗುಂಪುಗಾರಿಕೆ-ರಾಜ್ಯ ಜಿಲ್ಲಾ ಹಾಗೂ ಯಾವುದೇ ಹಂತದಲ್ಲಿ ತಲೆದೋರಿರುವ ಕೇಂದ್ರ ಸಮಿತಿ ಮಧ್ಯಪ್ರವೇಶಿಸಿ ದೃಢ ಕ್ರಮಕೈಗೊಳ್ಳಬೇಕೆಂದು ಪ್ರತಿನಿಧಿಗಳು ಒತ್ತಾಯಿಸಿದರು.

ಸಾಮೂಹಿಕ ಸಂಘಟನೆಗಳ ಬಗ್ಗೆ ನಿರ್ಣಯ ಇನ್ನೂ ಜಾರಿಯಾಗಿಲ್ಲ ಎಂದು ಹಲವಾರು ಪ್ರತಿನಿಧಿಗಳು ಬೇರೆ ಬೇರೆ ಹಂತದ ಪಕ್ಷದ ಸಮಿತಿಗಳಿಗೆ ನೆನಪಿಸಿದರು.

ಕಾಂ. ಇಂಬಿಚ್ಚಿ ಭಾವಾ ನಿಧನ

ಸಿಪಿಐ(ಎಂ)ನ ಹಿರಿಯ ನಾಯಕ ಹಾಗೂ ಕೇರಳ ರಾಜ್ಯ ಸಮಿತಿ ಸದಸ್ಯ ಕಾಂ. ಇಂಬಿಚ್ಚಿ ಭಾವಾ ಅವರು ಏಪ್ರಿಲ್ ಹನ್ನೊಂದರಂದು ನವದೆಹಲಿಯಲ್ಲಿ ನಿಧನರಾದರು. ಚಂಡಿಗಢದಲ್ಲಿ ನಡೆದ 15ನೇ ಮಹಾಧಿವೇಶನದಲ್ಲಿ ಭಾಗವಹಿಸಿ ಕೇರಳಕ್ಕೆ ಹಿಂತಿರುಗುವ ಮಾರ್ಗದಲ್ಲಿ ಅವರು ನವದೆಹಲಿಗೆ ಬಂದಿದ್ದರು. ಎದೆನೋವು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಂಡ ಕೂಡಲೇ ಅವರನ್ನು ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಗೆ ಸೇರಿಸಲಾಯಿತಾದರೂ ಅವರು ಹೃದಯಾಘಾತದಿಂದ ನಿಧನ ಹೊಂದಿದರು.



ಮಲಪ್ಪುರಂನಲ್ಲಿ ಜುಲೈ 17, 1917ರಲ್ಲಿ ಕಾರ್ಮಿಕ ಕುಟುಂಬದಲ್ಲಿ ಜನಿಸಿದ ಇಂಬಿಚ್ಚಿ ಭಾವಾ ವಿದ್ಯಾರ್ಥಿ ಜೀವನದಲ್ಲೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕರ್ತರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ನಂತರ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷವನ್ನು ಸೇರಿದ ಅವರು 1940ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರಾದರು. 1964ಕ್ಕೆ ಮೊದಲು ಫಾಲಕ್ಕಾಡ್ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿದ್ದರು. ಪಕ್ಷದ ವಿಭಜನೆ ಆದಾಗ (ಅಂದರೆ 1964ರಲ್ಲಿ) ಅವರು ಸಿಪಿಐ(ಎಂ)ನ ಜೊತೆ ದೃಢವಾಗಿ ನಿಂತರು. ಅವಿಭಜಿತ ಕಮ್ಯುನಿಸ್ಟ್ ಪಾರ್ಟಿಯ ರಾಷ್ಟ್ರೀಯ ಮಂಡಳಿಯಿಂದ ಹೊರಬಂದು ನಂತರ ಸಿಪಿಐ(ಎಂ) ಸ್ಥಾಪಿಸಿದ 32 ಸದಸ್ಯರಲ್ಲಿ ಕಾಂ. ಇಂಬಿಚ್ಚಿ ಭಾವಾ ಒಬ್ಬರು.

1967ರ ಎಡರಂಗ ಸರ್ಕಾರದಲ್ಲಿ ಅವರು ಮಂತ್ರಿಯಾಗಿದ್ದರು. ರಾಜ್ಯ ಸಭಾ ಲೋಕಸಭಾ ಹಾಗೂ ಕೇರಳ ವಿಧಾನಸಭೆಯ ಸದಸ್ಯರೂ ಆಗಿದ್ದರು. ದುಡಿವ ಜನರ ಅನೇಕ ಹೋರಾಟಗಳಲ್ಲಿ ಅವರು ಭಾಗವಹಿಸಿದ್ದರು. ಹಲವು ಸಾರಿ ಸೆರೆಮನೆ ವಾಸ ಕಂಡಿದ್ದರು. ಅವರು ಒಳ್ಳೆಯ ಸಂಘಟಕ, ಮಾತುಗಾರ ಮತ್ತು ಹೋರಾಟಗಾರರಾಗಿದ್ದರು.

ದುಡಿವ ಜನರ ಹಿತಾಸಕ್ತಿಗಾಗಿ ಅವಿರತ ದುಡಿದ ಈ ಕಮ್ಯುನಿಸ್ಟ್ ನಾಯಕನಿಗೆ ನೆನಪಿಗೆ ವಂದನೆ ಸಲ್ಲಿಸುತ್ತ ಸಿಪಿಐ(ಎಂ) ಪೊಲಿಟ್ ಬ್ಯೂರೋ ಅವರ ಕುಟುಂಬಕ್ಕೆ ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ನೃಪೇನ್ ಚಕ್ರವರ್ತಿ ಉಚ್ಚಾಟನೆ ಏಕೆ?

ಪೊಲಿಟ್ ಬ್ಯೂರೋ ಹೇಳಿಕೆ

'ಅವರು ಮಾಡಿದ ಆಪಾದನೆಗಳನ್ನು, ನಮ್ಮ ಶತ್ರುಗಳೂ ಎಂದೂ ಮಾಡಿಲ್ಲ'

ನೃಪೇನ್ ಚಕ್ರವರ್ತಿಯವರನ್ನು ಹಿಂದೆ 'ಕ್ಯಾರೇ' ಎಂದು ಮಾತನಾಡಿಸದ ಬೂರ್ಜ್ವಾ ಪತ್ರಿಕೆಗಳಿಗೆ ಈಗ ಅವರು 'ಹೀರೋ'. ನೃಪೇನ್ ಚಕ್ರವರ್ತಿ ಸಿಪಿಐ(ಎಂ)ನ್ನು ಹಳಿಯುತ್ತಿರುವುದನ್ನು ಮಸಾಲೆ ಹಚ್ಚಿ ಸುದ್ದಿ ಮಾಡಿ ಕೈ ತಟ್ಟಿ ಕುಣಿಯುತ್ತಿದ್ದಾರೆ. ಅವರನ್ನು ಘೋರ ಅಶಿಸ್ತಿಗಾಗಿ ಪಕ್ಷದಿಂದ ಉಚ್ಚಾಟಸಿದ ಪೊಲಿಟ್ ಬ್ಯೂರೋ ತನ್ನ ಹೇಳಿಕೆಯಲ್ಲಿ ಇದಕ್ಕೆ ಕಾರಣವಿತ್ತಿದೆ:

ಸಿಪಿಐ(ಎಂ)ನ ಪ್ರಮುಖ ನಾಯಕರಲ್ಲಿ ಒಬ್ಬರಾದ ನೃಪೇನ್ ಚಕ್ರವರ್ತಿ ಇತ್ತೀಚೆಗೆ ಘೋರ ಅಶಿಸ್ತಿನಿಂದ ವರ್ತಿಸುತ್ತಿದ್ದಾರೆ. ಅವರು ಪದೇ ಪದೇ ಪಕ್ಷವನ್ನು ಮತ್ತು ಪಶ್ಚಿಮ ಬಂಗಾಳ ಹಾಗೂ ತ್ರಿಪುರಾ ಎಡರಂಗ ಸರಕಾರಗಳನ್ನು ಸಾರ್ವಜನಿಕವಾಗಿ ಹಳಿಯುತ್ತಿದ್ದಾರೆ. ಇದು ಅತ್ಯಂತ ದುರದೃಷ್ಟಕರ. ಏಕೆಂದರೆ ನೃಪೇನ್ ಚಕ್ರವರ್ತಿ ಪಕ್ಷದ ಶಿಸ್ತಿನ ಸಿಪಾಯಿಯಾಗಿ ವರ್ತಿಸುವ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನ ಪರಂಪರೆಯ ಗರಡಿಯಲ್ಲಿ ಪಳಗಿದವರು.

1993ರಲ್ಲಿ ತ್ರಿಪುರಾದ ಎಡರಂಗ ಸರಕಾರದ ರಚನೆಯ ನಂತರ, ಅವರು ಪಕ್ಷ ಜಲಂಧರ್ ಮಹಾಧಿವೇಶನದಿಂದೀಚೆಗೆ(1978ರಲ್ಲಿ ನಡೆದ ಹತ್ತನೇ ಮಹಾಧಿವೇಶನ) ಅಂಗೀಕರಿಸಿದ ರಾಜಕೀಯ ನಿಲುಮೆ ಬಗೆಗೆ ಹಲವಾರು ಸಂದೇಹಗಳನ್ನು ವ್ಯಕ್ತಪಡಿಸಿದ್ದರು. ಆದರೆ ಅವರು ಕೇಂದ್ರ ಸಮಿತಿ ಹಾಗೂ ಪೊಲಿಟ್‌ಬ್ಯೂರೋದ ಯಾವುದೇ ಸಭೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಇಂತಹ ಸಭೆಗಳಲ್ಲಿ ಈ ಬಗ್ಗೆ ಸಾಮೂಹಿಕವಾಗಿ ಚರ್ಚೆ ನಡೆಸಬಹುದಿತ್ತು. ಚರ್ಚೆಯಿಂದ ಅವರಿಗೂ ಪ್ರಯೋಜನವಾಗುತ್ತಿತ್ತು. ಆದರೆ ಅದರ ಬದಲು ಕಮ್ಯುನಿಸ್ಟ್ ಪಕ್ಷದ ಸಾಮೂಹಿಕ ಕೆಲದ ಮೂಲಭೂತ ನೀತಿಯನ್ನು ಉಲ್ಲಂಘಿಸಿ ಅವರು ಅತಿ ವೈಯಕ್ತಿಕ ವಾದವನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ.

ಕಳೆದ ವರ್ಷದಿಂದ ಅವರು ಪಕ್ಷದ ವಿರುದ್ಧ ಸುಳ್ಳು ಆಪಾದನೆ ಮಾಡಲು ಪತ್ರಿಕೆಗಳನ್ನು ಬಳಸುವ ಪರಿಪಾಠ ಆರಂಭಿಸಿದ್ದರು. ಅವರು ಆಸ್ಪತ್ರೆಯಲ್ಲಿ ಇದ್ದಾಗ ಬಂಗಾಳೀ ಪತ್ರಿಕೆಗೆ ಪಕ್ಷವನ್ನು ಹಳಿಯುವ ಸಂದರ್ಶನವೊಂದನ್ನು ನೀಡಿದ್ದರು. ಆಗ ಸೇರಿದ್ದ ಕೇಂದ್ರ ಸಮಿತಿ ಅದನ್ನು ಗಂಭೀರವಾಗಿ ಪರಿಗಣಿಸಿ, ಪ್ರಧಾನ ಕಾರ್ಯದರ್ಶಿಗಳಿಗೆ ಅವರಿಗೆ ಎಚ್ಚರಿಕೆ ನೀಡುವಂತೆ ನಿರ್ದೇಶಿಸಿತ್ತು. ಅದರ ನಂತರ ಅವರು ಈ ರೀತಿ ಪುನಃ ಮಾಡುವುದಿಲ್ಲ ಎಂದು ಆಶ್ವಾಸನೆ ನೀಡಿದ್ದರು. ಆದರೆ ತ್ರಿಪುರಾ ಹಾಗೂ ಪಶ್ಚಿಮ ಬಂಗಾಳದ ಪಕ್ಷದ ಘಟಕಗಳ ವಿರುದ್ಧ ಸುಳ್ಳು ಆಪಾದನೆಗಳನ್ನು ಮಾಡುವ ಇನ್ನೊಂದು ಸಂದರ್ಶನವನ್ನು, ಪಕ್ಷದ ಮಹಾಧಿವೇಶನದ ಸ್ವಲ್ಪ ಮೊದಲು ಕೊಟ್ಟಿದ್ದರು. ಅವರು ಸಂದರ್ಶನದಲ್ಲಿ ಮಾಡಿರುವ ಆಪಾದನೆಗಳು ಎಷ್ಟು ಗಂಭೀರವಾದದ್ದೆಂದರೆ ಪಕ್ಷದ ಶತ್ರುಗಳೂ ಇಂತಹ ಆಪಾದನೆಗಳನ್ನು ಈವರೆಗೆ ಮಾಡಿಲ್ಲ. ಇದನ್ನು ಪಕ್ಷದ ರಾಜಕೀಯ ವಿರೋಧಿಗಳು ಪೂರ್ಣವಾಗಿ ಬಳಸಿಕೊಂಡಿದ್ದಾರೆ. ಪ್ರಧಾನ ಕಾರ್ಯದರ್ಶಿಯವರು ಪೊಲಿಟ್ ಬ್ಯೂರೋ ಪರವಾಗಿ ಅವರಿಗೆ ಪತ್ರ ಬರೆದು ಈ ಆಪಾದನೆಗಳನ್ನು ವಾಪಸು ತೆಗೆದುಕೊಳ್ಳುವಂತೆ ಕೇಳಿದ್ದರರು. ಆದರೆ ಅದಕ್ಕೆ ಅವರು ಉತ್ತರಿಸಿಲ್ಲ. ಚಂಡೀಘರದಲ್ಲಿ ಸೇರಿದ್ದ ಕೇಂದ್ರ ಸಮಿತಿ ಸಭೆ ಪೊಲಿಟ್ ಬ್ಯೂರೋದ ಕ್ರಮವನ್ನು ಅನುಮೋದಿಸಿದೆ. ಕಮ್ಯುನಿಸ್ಟ್ ಚಳುವಳಿಗೆ ಅವರ ದೀರ್ಘ ಸೇವೆ ಹಾಗೂ ಅಪಾರ ತ್ಯಾಗವನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರ ಸಮಿತಿ ಅವರನ್ನು ಎಲ್ಲಾ ಚುನಾಯಿತ ಹುದ್ದೆಗಳಿಂದ ಮಾತ್ರ ಕೈಬಿಡುವ ನಿರ್ಧಾರ ಕೈಗೊಂಡಿತು. ಅವರಿಗೆ ತಮ್ಮ ತಪ್ಪು ತಿದ್ದುಕೊಳ್ಳುವ ಇನ್ನೊಂದು ಅವಕಾಶವನ್ನು ಈ ರೀತಿ ಕೊಡಲಾಯಿತು.

ಆದರೆ ತಮ್ಮ ತಪ್ಪನ್ನು ತಿದ್ದಿಕೊಳ್ಳುವ ಬದಲು, ಅವರು ಪತ್ರಿಕಾಸಮ್ಮೇಳನವನ್ನು ಕರೆದು, ಪಕ್ಷ ಮತ್ತು ಅದರನಾಯಕರ ವಿರುದ್ಧ ಅತ್ಯಂತ ವಿಷಪೂರಿತ ಸುಳ್ಳು ಆಪಾದನೆಗಳ ಭರ್ಜರಿ ಆಕ್ರಮಣವನ್ನೇ ಆರಂಭಿಸಿದ್ದಾರೆ. ಪೊಲಿಟ್‌ಬ್ಯೂರೋ ಇನ್ನೊಮ್ಮೆ ಅವರನ್ನು ತಮ್ಮ ತಪ್ಪಿನ ಗಂಭೀರತೆಯನ್ನು ಅರಿತುಕೊಂಡು, ಈ ತಪ್ಪು ಹಾದಿಯಿಂದ ವಾಪಸು ಬರುವಂತೆ ಕೇಳಿಕೊಂಡಿತು. ಆದರೆ ಅವರು ಇದಕ್ಕೆ ತಯಾರಿರಲಿಲ್ಲ.

ಎಷ್ಟೇ ಹಿರಿಯ ನಾಯಕರಾದರೂ, ಪಕ್ಷದ ಸಾಮಾನ್ಯ ಶಿಸ್ತನ್ನು ಈ ರೀತಿ ರಾಜಾರೋಷವಾಗಿ ಉಲ್ಲಂಘಿಸುವಂತಿಲ್ಲ, ಯಾವ ಪಕ್ಷದ ಸದಸ್ಯನೂ, ಪಕ್ಷಕ್ಕಿಂತ ತಾವು ಹೆಚ್ಚು ಎಂದುಕೊಳ್ಳಬಾರದು. ತ್ರಿಪುರಾದಲ್ಲಿ ನಮ್ಮ ಪಕ್ಷ ಕಾಂಗ್ರೆ-ಟಿಯುಜೆಎಸ್. ರಾಜ್ಯದ ಪರಿಸ್ಥಿತಿಯನ್ನು ಹದಗೆಡಿಸಲು ಮಾಡುವ ಪ್ರಯತ್ನಗಳನ್ನು ವಿಫಲಗೊಳಿಸುವ ರಾಜಕೀಯ ಸಮರದಲ್ಲಿ ತೊಡಗಿದೆ. ನೃಪೇನ್ ಚಕ್ರವರ್ತಿ ಅವರ ಸಾರ್ವಜನಿಕ ನಿಲುಮೆ, ಪಕ್ಷವನ್ನು ಈ ಸಮಯದಲ್ಲಿ ಕಷ್ಟಕ್ಕೀಡುಮಾಡಿದೆ. ಪಕ್ಷ ಇತ್ತೀಚೆಗೆ ಕೊನೆಗೊಂಡ 15ನೇ ಮಹಾಧಿವೇಶನದಲ್ಲಿ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಪ್ರಬಲ ಹೋರಾಟಗಳನ್ನು ಸಂಘಟಿಸಲು ನಿರ್ಧರಿಸಿದೆ. ಇಂತಹ ಸಂದರ್ಭದಲ್ಲಿ ಅವರ ಸುಳ್ಳು ಆಪಾದನೆಗಳು, ಪಕ್ಷದ ಉತ್ತಮ ಹೆಸರನ್ನು ಕೆಡಿಸಲು ಬಿಡಬಾರದು.

ಆದ್ದರಿಂದ ಪೊಲಿಟ್ ಬ್ಯೂರೋ ಬೇರೆ ನಿರ್ವಾಹವಿಲ್ಲದೆ ಅವರನ್ನು ಪಕ್ಷದ ಸದಸ್ಯತ್ವದಿಂದ ಉಚ್ಚಾಟಿಸಲು ನಿರ್ಧರಿಸಿದೆ. ಪಕ್ಷದ ವಿರುದ್ಧ ಹರಿಯಬಿಡಲಾಗಿರುವ ಈ ದುರುದ್ದೇಶಪೂರಿತ ದಾಳಿಯನ್ನು ಐಕ್ಯತೆಯಿಂದ ಹಿಮ್ಮೆಟ್ಟಿಸಬೇಕೆಂದು ಪೊಲಿಟ್ ಬ್ಯೂರೋ ಇಡೀ ಪಕ್ಷಕ್ಕೆ ಕರೆ ನೀಡುತ್ತದೆ.

ಜಿಂಬಾಬ್ವೆ ಚುನಾವಣೆಯಲ್ಲಿ ಮುಗಾಬೆ ಪಕ್ಷಕ್ಕೆ ಭಾರೀ ಜಯ

ಲೋಕಸಂಚಾರ

-ಶರತ್ಚಂದ್ರ

ಜಿಂಬಾಬ್ವೆಯಲ್ಲಿ ನಡೆದ ಚುನಾವಣೆಗಳಲ್ಲಿ ರೊಬರ್ಟ್ ಮುಗಾಬೆಯವರ ZANU-PF (ಜಿಂಬಾಬ್ವೆ ಆಫ್ರಿಕನ್ ನ್ಯಾಶನಲ್ ಯೂನಿಯನ್ ಪೆಟ್ರಿಯೋಟಿಕ್ ಫ್ರಂಟ್) ಎರಡು ಸೀಟು ಬಿಟ್ಟರೆ ಉಳಿದೆಲ್ಲಾ ಸೀಟುಗಗಳನ್ನು ಗೆಲ್ಲುವ ಮೂರನೇ ಭಾರಿ ಜಯಭೇರಿ ಬಾರಿಸಿ ಅಧಿಕಾರರಕ್ಕೆ ಬಂದಿದೆ. 1970ರಲ್ಲಿ ವರ್ಣಬೇಧ ಬಿಳಿಯರ ಸರಕಾರದ ವಿರುದ್ಧ ಹೋರಾಟದಲ್ಲಿ ಗೆದ್ದು ಅಧಿಕಾರಕ್ಕೆ ಬಂದ ZANU-PF ಸತತವಾಗಿ ಚುನಾವಣೆಗಳಲ್ಲಿ ಗೆದ್ದು ಬಂದು ದಾಖಲೆ ಮಾಡಿದೆ. ಆಫ್ರಿಕಾದ ದೇಶವೊಂದರಲ್ಲಿ ಇಂತಹ ರಾಜಕೀಯ ಸ್ಥಿರತೆ ಗಮನಾರ್ಹ. ರೋಬರ್ಟಟ್ ಮುಗಾಬೆಯವರ ZANU-PF ಸರಕಾರಕ್ಕೆ ದಕ್ಷಿಣ ಆಫ್ರಿಕಾದ ಹಿಂದಿನ ವರ್ಣಭೇದ ಸರ್ಕಾರಗಳಾಗಲಿ, ಸಾಮ್ರಾಜ್ಯಶಾಹಿಗಳು ಕಿರುಕುಳ ಏನೂ ಕಡಿಮೆ ಇರಲಿಲ್ಲ. ಜೋಶುವಾ ಎನ್ ಕೊಮೊರ ನಾಯಕತ್ವದ ZAPU ಮೂಲಕ ಕಿರುಕುಳ ಕೊಡಲಾಗಿತ್ತು. ಜಿಂಬಾಬ್ವೆಗೆ ಆರ್ಥಿಕ ನೆರವು ನೀಡದೆ ಸಹ ತೊಂದರೆ ಕೊಡಲಾಗಿತ್ತು. ಇದನ್ನೆಲ್ಲಾ ಎದುರಿಸಿ ಮುಗಾಬೆಯವರ ನಾಯಕತ್ವದಲ್ಲಿ ZANU-PF (ಪ್ರಗತಿಪರ ಆಳುವ ಪಕ್ಷ) ಮುಂದೆ ಹೆಜ್ಜೆ ಇಟ್ಟಿದೆ. ಕರಿಯ ಹಲವು ಬಣಗಳ ನಡುವೆ, ಹಾಗೂ ಕರಿಯರ-ಬಿಳಿಯರ ನಡುವೆ 15 ವರ್ಷಗಳಿಂದ ಕಂಡು ಬಂದಿರುವ ಸಾಮರಸ್ಯ ಮುಗಾಬೆ ಸರ್ಕಾರ ಪ್ರಮುಖ ಸಾಧನೆಗಳಲ್ಲೊಂದು. ಜಿಂಬಾಬ್ವೆ ಹಲವಾರು ಆರ್ಥಿಕ ಬೆಳವಣಿಗೆಯ ಸಮಸ್ಯೆಗಳನ್ನು ಎದುರಿಸುತ್ತಿದೆ.

ಇರಾಕ್ ಮೇಲೆ ದಿಗ್ಬಂಧನ ಸ್ವಲ್ಪ ಸಡಿಲಿಕೆ

ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಇರಾಕ್ ಮೇಲಿನ ದಿಗ್ಬಂಧನದ ಬಗ್ಗೆ ಸಭೆ ಸೇರಿ ಪುನರ್ವಿಮರ್ಶಿಸಿ, ದಿಗ್ಬಂಧನವನ್ನು ಸ್ವಲ್ಪ ಸಡಿಲಿಸಿದ್ದರೂ ಪೂರ್ಣವಾಗಿ ತೆಗೆದು ಹಾಕಲು ನಿರ್ಧರಿಸಿದೆ. ಎರಡು ಶತಕೋಟಿ ಡಾಲರಿನಷ್ಟು ತೈಲ ಮಾರಾಟ ಮಾಡಿ ಆಹಾರ, ಔಷಧಿ ಹಾಗೂ ಇತರ ಅತ್ಯಾವಶ್ಯಕ ವಸ್ತುಗಳ ಖರೀದಿಗೆ ಬೇಕಾಗುವಷ್ಟು ಮಟ್ಟಿಗೆ ದಿಗ್ಬಂಧನವನ್ನು ಸಡಿಲಿಸಲಾಗಿದೆ. ಇದು ಅಮೇರಿಕದ ಒತ್ತಾಯದಿಂದ ಆದ ನಿರ್ಣಯ, ಇರಾಕ್ ನ ಮೇಲೆ ದಿಗ್ಬಂಧನ ತೆಗೆಯಲು ರಶ್ಯ, ಚೀನಾ, ಫ್ರಾನ್ ಗಳಿಂದ ತೀವ್ರ ಒತ್ತಾಯವಿದ್ದರೂ, ಶಸ್ತ್ರಾಸ್ತ್ರ ಪರೀಕ್ಷಣಾ ವರದಿ ಇರಾಕ್ ವಿರುದ್ಧ ಹೋಗಿದ್ದರಿಂದ, ಇದು ಸಾಧ್ಯವಾಗದೆ ಹೋಗಿದೆ. ಅಗತ್ಯ ಔಷಧಿ ಸಿದೆ, ಇನ್ನೂ ಹಲವಾರು ತೊಂದರೆಗಳನ್ನು ದಿಗ್ಬಂಧನದಿಂದ ಅನುಭವಿಸುತ್ತಿದ್ದರೂ, ದಿಗ್ಬಂಧನ ತೆಗೆಯದಿರುವುದು ಗಂಭೀರ ಅಂತರ್ರಾಷ್ಟ್ರೀ ಪರಿಸ್ಥಿತಿಯ ದ್ಯೋತಕ. ಇರಾಕ್ ನ ಸದ್ದಾಂ ಸರ್ಕಾರ ಈ ನಿರ್ಣಯವನ್ನು ತೀವ್ರವಾಗಿ ಖಂಡಿಸಿದ್ದು, ಇದು 1991ರ ಮೊದಲ ನಿರ್ಣಯಕ್ಕಿಂತ ಕಟುವಾದದ್ದು ಎಂದು ಕರೆದಿದೆ. ಈ ನಿರ್ಣಯವನ್ನು ತಿರಸ್ಕರಿಸಲು ನಿರ್ಧರಿಸಿದೆ. ಈ ನಿರ್ಣಯ ಪುನಃ ಇರಾಕ್‌ನ ಸಾರ್ವಭೌಮತೆಯನ್ನು ಪೂರ್ಣವಾಗಿ ಕೆಡೆಗಣಿಸಿದೆ ಎಂದು ಇರಾಕ್ ಆಪಾದಿಸಿದೆ.

ನಿರ್ಣಯದ ಪ್ರಕಾರ ಇರಾಕ್ ತೈಲ ರಫ್ತು ಟರ್ಕಿನ್ ಬಂದುರುಗಳ ಮೂಲಕವೇ ಮಾಡಬೇಕು. ಇದರಿಂದ ಬಂದ ಹಣವನ್ನು ವಿಶ್ವಸಂಸ್ಥೆ ಮೇಲ್ವಿಚಾರಣೆಯಲ್ಲೇ ಖರ್ಚು ಮಾಡಬೇಕು. ಟರ್ಕಿನ್ ಬಂದರುಗಳ ಮೂಲಕ ತೈಲ ರಫ್ತಿಗೆ ಭಾರೀ ಪೈಪ್ ಲೈನ್ ಖರ್ಚನ್ನು ಟರ್ಕಿಗೆ ಕೊಡಬೇಕು. ಒಟ್ಟಾರೆ ಎರಡು ಶತಕೋಟಿ ಡಾಲರುಗಳಲ್ಲಿ, ಇರಾಕಿನ ಕೈಗೆ ಸಿಕ್ಕುವುದು 1.2 ಶತಕೋಟಿ ಡಾಲರು ಮಾತ್ರ. ಇದು ಸಾಲದೆಂಬಂತೆ ವಿಶ್ವಸಂಸ್ಥೆ ಶಸ್ತ್ರಾಸ್ತ್ರ ಪರೀಕ್ಷಕರು, ಯಾವುದೇ ಪುರಾವೆ ಇಲ್ಲದೆ, ಇರಾಕ್ ಬಹುಶಃ ಜೈವಿಕ ಅಸ್ತ್ರ ನಿರ್ಮಾಣದ ಕೇಂದ್ರಗಳನ್ನು ಬಚ್ಚಿಟ್ಟಿರಬೇಕು ಎಂದು ವರದಿ ಮಾಡಿದೆ.

ಬೆನಜಿರ್ ಅಮೇರಿಕ ಭೇಟಿ

ಪಾಕಿಸ್ತಾನದ ಪ್ರಧಾನಿ ಬೆನಜಿರ್‌ರ ಅಮೇರಿಕ ಭೇಟಿಯ ಸಂದರ್ಭದಲ್ಲಿ ನಿರೀಕ್ಷಿತವಾಗಿಯೇ, ಭಾರತ-ವಿರೋಧಿ ಅಪಪ್ರಚಾರ ಪರಾಕಾಷ್ಟಕ್ಕೇರಿತ್ತು. ಪಾಕಿಸ್ತಾನಕ್ಕೆ ಆರ್ಥಿಕ-ಮಿಲಿಟರಿ ನೆರವು ನಿಲ್ಲಸಲು ಕಾರಣವಾದ ಪ್ರೆಸ್ಲರ್ ತಿದ್ದುಪಡಿಯನ್ನು ಕೈಬಿಡಲು ಬೆನಜಿರ್ ಭುಟ್ಟೋ ಒತ್ತಾಯಿಸಿದರು. ಅಧ್ಯಕ್ಷ ಕ್ಲಿಂಟನ್ ಸಹ ಇದಕ್ಕೆ ತಲೆ ಯಾಡಿಸಿದರು ಎನ್ನಲಾಗಿದೆ. ಆದರೆ ಪ್ರೆಸ್ಲರ್ ತಿದ್ದುಪಡಿ ತೆಗೆದು ಹಾಕುವುದು ಅಷ್ಟೇನೂ ಸುಲಭವಲ್ಲ, ಪಾಕಿಸ್ತಾನಕ್ಕೆ ಆರ್ಥಿಕ, ಮಿಲಿಟರಿ ನೆರವು ಆರಂಭಿಸಬೇಕಾದರೆ, ಪ್ರೆಸ್ಲರ್ ತಿದ್ದುಪಡಿ ಪ್ರಕಾರ ಕ್ಲಿಂಟನ್ ಪಾಕಿಸ್ತಾನ ಅಣ್ವಸ್ತ್ರ ಹೊಂದಿಲ್ಲ ಮತ್ತು ಅಣ್ವಸ್ತ್ರ ತಯಾರಿಸುವ ತಯಾರಿಯಲ್ಲಿ ತೊಡಗಿಲ್ಲ ಎಂದು ಸರ್ಟಿಫಿಕೇಟು ಕೊಡಬೇಕು. ಪಾಕಿಸ್ತಾನ ಗಂಭೀರವಾಗಿ ಅಣ್ವಸ್ತ್ರತಯಾರಿಕೆಯಲ್ಲಿ ತೊಡಗಿದೆ ಎಂಬುದು ಸಾರ್ವಜನಿಕ ಗುಟ್ಟು. ಬೆನಜಿರ್ ಕಾಶ್ಮೀರ ಸಮಸ್ಯೆಯಲ್ಲಿ ಅಮೇರಿಕ ಮಧ್ಯಸ್ತಿಕೆ ವಹಿಸಬೇಕೆಂಬ ಸಲಹೆಯನ್ನು ಮಂಡಿಸಿದರು. ಮೂರನೇ ದೇಶ ಕಾಶ್ಮೀರ ಸಮಸ್ಯೆಯಲ್ಲಿ ತಲೆಹಾಕುವುದು ಭಾರತ ವಿರೋಧಿಸುತ್ತದೆ. ಅಮೇರಿಕ ಸಹ ಕಾಶ್ಮೀರ ಸಮಸ್ಯೆಯನ್ನು ಭಾರತದ ಮೇಲೆ ಇತರ ವಿಷಯಗಳ ಬಗ್ಗೆ ಒತ್ತಡ ಹೇರುವ ಅಸ್ತ್ರವಾಗಿ ಬಳಸುತ್ತಿದೆ. ಭಾರತ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದಕ್ಕೆ ಸಹಿ ಹಾಕಿದರೆ, ತಾನೂ ತಯಾರು ಎನ್ನುವ ಮೂಲಕ ಪಾಕಿಸ್ತಾನ ಅಮೇರಿಕದ ಒತ್ತಡಕ್ಕೆ ಕುಮ್ಮಕ್ಕು ಕೊಟ್ಟಿದೆ.

ಭಾರತ-ವಿರೋಧಿ ಅಪಪ್ರಚಾರ ಬಿಟ್ಟರೆ ಯಾವುದೇ ನಿರ್ದಿಷ್ಟ ಗೆಲವು ಸಾಧಿಸದಿದ್ದರೂ, ಬೆನಜಿರ್ ಅಮೇರಿಕ ಭೇಟಿ ಭಾರತ-ಪಾಕಿಸ್ತಾನ ಸಂಬಂಧಗಳನ್ನು ಘರ್ಷಣೆಗೆ ರಹಿತವಾಗಿಸುವುದರ ವಿರುದ್ಧ ಇನ್ನೊಂದು ಹಿನ್ನೆಡೆಯಾಗಿದೆ. ಅಮೇರಿಕನ್ ಹಾಗೂ ಇತರ ಸಾಮ್ರಾಜ್ಯಶಾಹಿಗಳು ಭಾರತ-ಪಾಕಿಸ್ತಾನದ ಸಂಬಂಧಗಳ ನಡುವೆ ಹುಳಿ ಹಿಂಡಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಪಾಕಿಸ್ತಾನ ಸರ್ಕಾರ ಸಹ ಅದು ಮಿಲಿಟರಿ ಇರಲಿ, ಪ್ರಜಾಸತ್ತಾತ್ಮಕ ಸರ್ಕಾರ ಇರಲಿ, ಆಂತರಿಕ ರಾಜಕೀಯ ಕಾರಣಗಳಿಗಾಗಿ ಹಾಗೂ ಅಮೇರಿಕದ ಬೆಂಬಲಗಳಿಸಲು ಭಾರತ-ವಿರೋಧಿ ಅಸ್ತ್ರ ಬಳಸುತ್ತದೆ. ಭಾರತದ ಆಳುವ ವರ್ಗ ಹಾಗೂ ಸರ್ಕಾರ ಸಹ ಭಾರತ-ಪಾಕಿಸ್ತಾನ ಸಂಬಂಧ ಸಾಮಾನ್ಯಗೊಳಿಸುವತ್ತ, ಇತರರು ಈ ವೈಷ್ಯಮ್ಯದ ಲಾಭ ಪಡೆಯದಂತೆ ಯಾವುದೇ ಎಚ್ಚರ ವಹಿಸಿಲ್ಲ.

ಹವಾಮಾನ ಬದಲಾವಣೆ ಬಗ್ಗೆ ಬರ್ಲಿನ್ ಸಮ್ಮೇಳನ ವಿಫಲ

ಜಾಗತಿಕ ಹವಾಮಾನ ಬಿಸಿ ಏರಿಕೆ ಬಗ್ಗೆ ಬರಿಯ ಬಿಸಿ ಬಿಸಿ ಚರ್ಚೆ

ಬರ್ಲಿನ್‌ನಲ್ಲಿ ನಡೆದ ಜಾಗ್ತತಿಕ ಹವಾಮಾನ ಬಿಸಿ ಏರಿಕೆ ಬಗ್ಗೆ ನಡೆಪ ಜಾಗತಿಕ ಸಮ್ಮೇಳನ 5 ಕೋಟಿ ರೂ. ವೆಚ್ಚ ಮಾಡಿದ್ದಲ್ಲದೆ, ಇನ್ನೇನನ್ನೂ ನಿರ್ದಿಷ್ಟವಾಗಿ ಸಾಧಿಸದೆ ಕೊನೆಗೊಂಡಿದೆ. ಇದಕ್ಕೆ ಮುಖ್ಯ ಕಾರಣ ಅಮೇರಿಕ ಹಾಗೂ ಇತರ ಸಾಮ್ರಾಜ್ಯಶಾಹಿ ದೇಶಗಳು ನಿರ್ದಿಷ್ಟ ತೀರ್ಮಾನಗಳಿಗೆ ಬರುವುದರ ವಿರುದ್ಧ ಹಾಕಿದ ತಡೆ. 10 ದಿನಗಳ ಬಿಸಿ ಬಿಸಿ ಚರ್ಚೆ ನಂತರ ಜಾಗತಿಕ ಹವಾಮಾನ ಬಿಸಿ ಏರಿಕೆಗೆ ಕಾರಣವಾಗಿರು ಗ್ರೀನ್ ಹೌಸ್ ಅನಿಲಗಳು ಎಂದು ಕರೆಯಲಾಗುವ ಅನಿಲಗಳನ್ನು ಕಡಿಮೆ ಮಾಡುವ ಪ್ರಮಾಣ ನಿರ್ಧರಿಸಲು ಎರಡು ವರ್ಷಗಳ ಕಾಲಾವಧಿ ನಿರ್ಧರಿಸಲಾಗಿದೆ. ಜಾಗತಿಕ ಹವಾಮಾನ ಬಿಸಿ ಏರಿಕೆಯ ಒಂದು ಪ್ರಮುಖ ಪರಿಸರ ಸಮಸ್ಯೆ. ಅದನ್ನು ತುರ್ತಾಗಿ ಪರಿಹರಿಸದಿದ್ದರೆ, ತೀವ್ರ ಪರಿಣಾಮಗಳಾಗಬಹುದು ಎಂಬ ಹಿನ್ನೆಲೆಯಲ್ಲಿ, ಈನಿರ್ಧಾರ ತೀರಾ ಅಪಾಯಕಾರಿ ನಿರಾಶಾದಾಯಕ ಎಂದು ಹಲವು ಪರಿಸರವಾದಿಗಳು ಟೀಕಿಸಿದ್ದಾರೆ.

ಇದಲ್ಲದೆ 170 ದೇಶಗಳ ಸಮ್ಮೇಳನ ಅಮೇರಿಕದ ಒತ್ತಡದ ಮೇರೆಗೆ ಇನ್ನೊಂದು ಅಪಾಯಕಾರಿ ಸೂಚನೆಗಳನ್ನು ಅಂಗೀಕರಿಸಿದೆ. 'ಜಂಟಿ ಜ್ಯಾರಿ' ಎಂದು ಕರೆಯಲಾಗುವ ಈ ಸೂತ್ರದ ಪ್ರಕಾರ (ಇದನ್ನು J-1ಎಂದೂ ಕರೆಯುತ್ತಾರೆ) ಕೈಗಾರಿಕೀಕೃತ ದೇಶಗಳು ತಮ್ಮ ಗ್ರೀನ್ ಹೌಸ್ ಅನಿಲಗಳ ಪ್ರಮಾಣ ಕಡಿಮೆ ಮಾಡುವುದರ ಬದಲು ಮೂರನೇ ಜಗತ್ತಿನ ದೇಶಗಳಿಗೆ ತಂತ್ರಜ್ಞಾನ-ವರ್ಗಾವಣೆ ಮಾಡಬಹುದು. ಈ ಅಪಾಯಕಾರಿ ಸೂತ್ರ ಈ ತೀವ್ರ ಪರಿಸರ ಸಮಸ್ಯೆ ಪರಿಹರಿಸುವುದರಲ್ಲಿ ತೀವ್ರ ಹಿನ್ನಡೆ. ಏಕೆಂದರೆ ಅತ್ಯಂತ ಹೆಚ್ಚು ಗ್ರೀನ್ ಹೌಸ್ ಅನಿಲಗಳನ್ನು ತಯರು ಮಾಡಿ, ಈ ಸಮಸ್ಯೆ ಸೃಷ್ಟಿಸಿರುವ ಈ ದೇಶಗಳು ವ್ಯವಸ್ಥಿತವಾಗಿ ಇದಕ್ಕೆ ಕಡಿವಾಣ ಹಾಕದಿದ್ದರೆ ಬಗೆಹರಿಯಲಾರದು. ರಿಯೋ ಸಮ್ಮೇಳನದಲ್ಲಿ 2000ರ ಹೊತ್ತಿಗೆ, 19920 ಮಟ್ಟಕ್ಕೆ ಗ್ರೀನ್ ಹೌಸ್ ಅನಿಲಗಳನ್ನು ಕಡಿಮೆ ಮಾಡುವ ನಿರ್ಧಾರದ ಜಾರಿಯಲ್ಲಿ ಹೆಚ್ಚಿನ ಅಭಿವೃದ್ಧಿ ಹೊಂದಿದ ದೇಶಗಳು ಕಾಳಜಿ ವಹಿಸಿಲ್ಲ.

ಬಂಡವಾಳಶಾಹಿ ಯಾವುದೇ ಮನುಕುಲದ ಮುಂದಿರುವ ಯಾವುದೇ ಸಮಸ್ಯೆಯನ್ನು ಬಗೆಹರಿಸಲಾರದು ಮಾತ್ರವಲ್ಲ ಅದನ್ನು ಉಲ್ಬಣಗೊಳಿಸುತ್ತದೆ ಎಂಬುದಕ್ಕೆ ಹೆಚ್ಚಿನ ಪುರಾವೆ ಬೇಕೆ?

ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷದ 15ನೇ ಮಹಾಧಿವೇಶನ

ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷದ 15ನೇ ಮಹಾಧಿವೇಶನ ಫೆಬ್ರುವರಿಯಲ್ಲಿ ಜರುಗಿತು. ಜಾಫ್ನಾ ಸೇರಿದಂತೆ ಶ್ರೀಲಂಕಾದ ಎಲ್ಲಾ ಒಂಭತ್ತು ಪ್ರಾಂತ್ಯಗಳಲ್ಲಿ ಹಬ್ಬಿರುವ ಪಾರ್ಟಿ ಶಾಖೆಗಳ 500 ಪ್ರತಿನಿಧಿಗಳು ಭಾಗವಹಿಸಿದ ಈ ಮಹಾಧಿವೇಶನದಲ್ಲಿ ತೀವ್ರವಾಗಿ ಬದಲಾದ ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ಸಮಗ್ರ ವಿಮರ್ಶೆ ನಡೆಸಿತು. ಶ್ರೀಲಂಕಾದಲ್ಲಿ ಇತ್ತೀಚೆಗೆ ಅಧಿಕಾರಕ್ಕೆ ಬಂದ 'ಜನತಾ ಮೈತ್ರಿ ಕೂಟ'ದ ಸರ್ಕಾರಕ್ಕೆ ಪಕ್ಷದ ಬೆಂಬಲ ಹಾಗೂ ಸರ್ಕಾರದಲ್ಲಿ ಭಾಗವಹಸಿದ್ದರ ಬಗ್ಗೆ ಸಹ ಮಹಾಧಿವೇಶನ ತೀವ್ರವಾಗಿ ಚರ್ಚಿಸಿತು.

'ಎಲ್ಲಾ ಪ್ರತಿನಿಧಿಕ ಪ್ರಜಾಸತ್ತಾತ್ಮಕ ಸಂಸ್ಥೆಗಳ ಪೂರ್ಣ ಬಳಕೆ'ಯನ್ನು ಪಕ್ಷ ಸಮರ್ಥಿಸುತ್ತದೆ. 'ಈ ಸಂಸ್ಥೆಗಳು ಪ್ರಚಾರ-ಪ್ರಕ್ಷೋಭೆಗೆ ವೇದಿಕೆಗಳು ಮಾತ್ರವಲ್ಲ, ಪಕ್ಷದ ಉದ್ದೇಶಗಳನ್ನು ಈಡೇರಿಸುವ ಸಾಧನೆಗಳು' ಎಂದು ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ವರದಿ ಒತ್ತಿ ಹೇಳಿದೆ. 'ಜನತಾ ಮೈತ್ರಿ ಕೂಟ' ರಚಿಸಿ ಅದನ್ನು ಅಧಿಕಾರಕ್ಕೆ ತರುವುದರಲ್ಲಿ ಪಕ್ಷದ ಪಾತ್ರವನ್ನು ಶ್ಲಾಘನೆ, ಸರ್ಕಾರದಲ್ಲಿ ಭಾಗವಹಿಸುವ ನಿರ್ಣಯವನ್ನು ಅನುಮೋದಿಸಿತು. ಈ ಸರ್ಕಾರದಲ್ಲಿ ಭಾಗವಹಿಸಲು ಉದ್ದೇಶ ಆರ್ಥಿಕ, ಸಾಮಾಜಿಕ ಬದಲಾವಣೆಯಲ್ಲಿ, ನಿರ್ದಿಷ್ಟ ಪ್ರಜಾಸತ್ತಾತ್ಮಕ ಬದಲಾವಣೆ ಪಕ್ಷದ ಉದ್ದೇಶ ಈಗಿರುವ ಸರ್ವಾಧಿಕಾರಿ ಅಧ್ಯಕ್ಷ ಪದ್ಧತಿಯನ್ನು ಕಿತ್ತೊಗೆದು ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಪುನಃ ಸ್ಥಾಪಿಸಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿ, ಬೆಳೆಸುವುದು, ಪಕ್ಷದ ಧ್ಯೇಯ ಎಂದಿದೆ. ಈಗ ಉಳಿದಿರುವ ಸಾಮಾಜಿಕ ಕಲ್ಯಾಣ ಯೋಜನೆಗಳು ಬಳಸಿ ಬೆಳೆಸುವ, ಹಾಗೂ ಸಾಮಾಜಿಕ ನ್ಯಾಯಕ್ಕ ಹೋರಾಡುವುದು ಪಕ್ಷ ಹಮ್ಮಿಕ್ರೊಂಡಿರುವ ಕಾರ್ಯಕ್ರಮ. ಸರ್ಕಾರದ ಒಳಗೆ ಇದ್ದುಕೊಂಡೇ ಸಾಮಾಜಿಕ ಕಲ್ಯಾಣ, ಸಾಮಾಜಿಕ ನ್ಯಾಯ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸುವ ಯಾವುದೇ ಪ್ರಯತ್ನವನ್ನು ಪಕ್ಷ ವಿರೋಧಿಸುತ್ತದೆ ಎಂದು ರಾಜಕೀಯ ನಿರ್ಣಯ ಹೇಳಿದೆ. 'ತಮಿಳು ಈಳಂ'ನ ಸಮಸ್ಯೆಯನ್ನು ಶಾಂತಿಯುತವಾಗಿ ರಾಷ್ಟ್ರೀಯ ಐಕ್ಯತೆ ಕಾಪಾಡುವ ರೀತಿಯಲ್ಲಿ ಬಗೆಹರಿಸಿ, ಉತ್ತರ-ಪೂರ್ವ ಪ್ರಾಂತ್ಯಗಳಲ್ಲಿ ಆಂತರಿಕ ಯುದ್ಧ ಕೊನೆಗೊಳಿಸುವುದಕ್ಕೆ ಪಕ್ಷ ಶ್ರಮಿಸುತ್ತದೆ ಎಂದಿದೆ.

ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷ (CPSL) ಮತ್ತು ಲಂಕಾ ಸಮ ಸಮಾಜ ಪಾರ್ಟಿ (LSSP)ಗಳನ್ನು ಒಂದುಗೂಡಿಸುವುದಕ್ಕೆ ತೀವ್ರ ಪ್ರಯತ್ನಗಳನ್ನು ನಡೆಸುವುದಾಗಿ ನಿರ್ಣಯ ಹೇಳಿದೆ. ಇದು ಮುಂದೆ ಎಡ ಐಕ್ಯತೆಗೂ ನೆರವಾಗುವುದು ಎಂದು ಪಕ್ಷ ಹೇಳಿದೆ. ಮಹಾಧಿವೇಶನ ಹೊಸ ಕೇಂದ್ರ ಸಮಿತಿ, ಮತ್ತು 12-ಸದಸ್ಯರ ಪೊಲಿಟ್‌ಬ್ಯೂರೋ ವನ್ನು ಆರಿಸಿತು. ರಾಜ ಕೊಲ್ಲೆರೆ ಮಹಾಕಾರ್ಯದರ್ಶಿಯಾಗಿ ಪೀಟರ್ ಕುನ್ ಮನ್ ಅಧ್ಯಕ್ಷರಾಗಿ, ದೇವ್ ಗುಣಶೇಖರ್ ಉಪಾಧ್ಯಕ್ಷರಾಗಿ, ಸಭಾಸಿಂ ಗೆ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಶ್ರೀಲಂಕಾ: ಜನಾಂಗ ಸಾಮರಸ್ಯದ ಆಶಾಭಾವನೆ ಭಂಗ

ಶ್ರೀಲಂಕಾದಲ್ಲಿ ಎಲ್.ಟಿ.ಟಿ.ಇ. ಮೂರು ತಿಂಗಳ ಕದನ ವಿರಾಮ ಉಲ್ಲಂಘಿಸಿ ನೌಕಾ ಸೇನೆಯ ಎರಡು ಗನ್ ಬೋಟ್ ಗಳನ್ನು ಮುಳುಗಿಸುವ ಮೂಲಕ, ಕದನ ಪುನಃ ಆರಂಭವಾಗಿದೆ. ಇದರಿಂದ ಶ್ರೀಲಂಕಾದ ತಮಿಳು ಸಮಸ್ಯೆ ಶಾಂತಿಯುತ ಮಾತುಕತೆಗಳ ಆಧಾರದ ಮೇಲೆ ಪರಿಹಾರ ಕಂಡು, ಎರಡು-ಜನಾಂಗಗಳ ನಡುವೆ ಸಾಮರಸ್ಯ ಪುನಃ ಸ್ಥಾಪನೆಗೊಳ್ಳಬಹುದೆಂಬ ಆಶಾಭಾವನೆಗೆ ತಣ್ಣೀರೆರಚಿದಂತಾಗಿದೆ. ಎಲ್.ಟಿ.ಟಿ.ಇ. ನಾಯಕ ವಿ. ಪ್ರಭಾಕರನ್ ತಮಿಳು ರೇಡಿಯೊದಲ್ಲಿ ಕದನ ವಿರಾಮ ಮುಗಿದಿದೆ ಎಂದು ಘೋಷಿಸಿದರು ಎನ್ನಲಾಗಿದೆ. ಆನಂತರ ಶ್ರೀಲಂಕಾ ಭೂ ಸೇನೆಯ ಎರಡು ಕ್ಯಾಂಪ್‌ಗಳ ಮೇಲೆ ಭಾರೀ ಧಾಳಿ ಮಾಡಿ ವಶಪಡಿಸಿಕೊಂಡು 21 ಸೈನಿಕರನ್ನು ಕೊಂದಿದ್ದಾರೆ. 14 ಜನ ಎಲ್.ಟಿ.ಟಿ.ಇ. ಗೆರಿಲ್ಲಾಗಳು ಸತ್ತಿದ್ದಾರೆ. ಎರಡೂ ಕಡೆ ಭಾರಿ ಸಾವು ನೋವುಗಳಾಗಿವೆ.

ಶ್ರೀಲಂಕಾದ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗರವರ ಜನಾಂಗೀಯ ಕಲಹ ಕೊನೆಗೊಳಿಸಿ ಶಾಂತಿ ಸ್ಥಾಪಿಸುವ ಪ್ರಾಮಾಣಿಕ ಪ್ರಯತ್ನದ ಹಿನ್ನೆಲೆಯಲ್ಲಿ, ಎಲ್.ಟಿ.ಟಿ.ಇ.ಯ ಈ ಕಾರ್ಯಾಚರಣೆ ದುರದೃಷ್ಟಕರ ಎನ್ನದೆ ವಿಧಿಯಿಲ್ಲ. ಅದು ತನ್ನ ಹಠಮಾರಿತನ, ತಮಿಳು ಜನರ ಸಮಸ್ಯೆ ಪರಿಹಾರಕ್ಕೆ ಶಾಂತಿಯುತ ಕ್ರಮಗಳ ಬಗ್ಗೆ ಅಪ್ರಮಾಣಿಕತನವನ್ನು ಮತ್ತೆ ಸಿದ್ಧಪಡಿಸಿದೆ. ಎಲ್.ಟಿ.ಟಿ.ಇ. ಕದನ ವಿರಾಮ ಮುರಿಯುವುದರಿಂದ ಮೂರನೇ ಹಂತದ ಕದನ ಆರಂಭವಾದಂತಿದೆ. ಎಲ್.ಟಿ.ಟಿ.ಇ. ಬಲಹೀನವಾದಾಗ ಮತ್ತು ತಮಿಳು ಜನರ ಶಾಂತಿಯುತ ಬಾಳ್ವೆಯ ಆಕಾಂಕ್ಷೆಯಿಂದ ಒತ್ತಾಯ ಬಂದಾಗ, ಶಾಂತಿ ಮಾತುಕತೆಯ ನಾಟಕ ಆಡಿ ಸರಿಯಾದ ಸಮಯ ನೋಡಿ ಪುನಃ ಅಕ್ರಮಣಕ್ಕೆ ಈ ಸಮಯ ಬಳಸಿಕೊಳ್ಳುತ್ತಿದೆ ಎಂಬ ಆಪಾದನೆಯನ್ನು ಪುನಃ ರುಜುವಾತು ಮಾಡಿದಂತಾಗಿದೆ.

ಈ ಬಾರಿ ಎಲ್.ಟಿ.ಟಿ.ಇ.ಯ ಈ ವರ್ತನೆ ಅತ್ಯಂತ ದುರದೃಷ್ಟಕರವಾಗಿತ್ತು, ಏಕೆಂದರೆ ಹಿಂದೆಂದೂ ಶ್ರೀಲಂಕಾದ ಸರ್ಕಾರ ಜನಾಂಗೀಯ ಶಾಂತಿ ಸ್ಥಾಪಿಸುವ ಬಗ್ಗೆ ಇಷ್ಟು ಪ್ರಾಮಾಣಿಕ ಕಾಳಜಿ ಹೊಂದಿದ್ದು ಇಲ್ಲ, ಅಧ್ಯಕ್ಷ ಚಂದ್ರಿಕಾ ಕುಮಾರತುಂಗಾರವರ ಜನತಾ ರಂಗದ ಮುಖ್ಯ ಆಶ್ವಾಸನೆಯೇ ಜನಾಂಗೀಯ ಶಾಂತಿ ಸ್ಥಾಪಿಸುವುದಾಗಿತ್ತು. ಈ ಬಗ್ಗೆ ಶ್ರೀಲಂಕಾದ ಜನತೆಯ ಜನಾದೇಶ ಈ ಸರ್ಕಾರದೊಂದಿಗಿದೆ. ಸರಕಾರ ಅಧಿಕಾರವಹಿಸಿಕೊಂಡಾಗಿನಿಂದ ಈ ದಿಕ್ಕಿನತ್ತ ಹಲವಾರು ಕ್ರಮಗಳನ್ನು ಕೈಗೊಂಡಿತ್ತು. ಎಲ್.ಟಿ.ಟಿ.ಇ. ನಿಂದ ಭರವಸೆಗೆ ಕಾಯದೆ, ಜಾಫ್ನಾದ ಮೇಲೆ ಆರ್ಥಿಕ ದಿಗ್ಬಂಧನ ತೆಗೆದು ಹಾಕಿತ್ತು. ಇತರ ಹೆಚ್ಚಿನ ಎಲ್ ಟಿಟಿಇ ಹಾಗೂ ತಮಿಳು ಜನರ ಬೇಡಿಕೆಯನ್ನು ಪೂರೈಸಿತ್ತು. ಪೂರ್ವ ಜಿಲ್ಲೆಯಲ್ಲಿ ಎಲ್ ಟಿಟಿಇ ಸಶಸ್ತ್ರವಾಗಿ ಓಡಾಡಲು ಸರ್ಕಾರ ಅವಕಾಶ ಮಾಡಿಕೊಟ್ಟಿತ್ತು. ಸೈನ್ಯದ ಹಾಗೂ ಇತರ ತಮಿಳು ಗುಂಪುಗಳ ತೀವ್ರ ವಿರೋಧ ಎದುರಿಸಿಯೂ ಸರ್ಕಾರ ಕ್ರಮ ಕೈಗೊಂಡಿತ್ತು. ಸರ್ಕಾರ ಈಡೇರಿಸದ ಏಕ ಮಾತ್ರ ಎಲ್.ಟಿ.ಟಿ.ಇ. ಬೇಡಿಕೆ ಎಂದರೆ ಪೂನೆರಿನ್ ಸೇನಾಕ್ಯಾಂಪನ್ನು ಬರ್‌ಖಾಸ್ತ್ ಮಾಡುವುದು. ಇದು ಒಂದೇ ಬೇಡಿಕೆ ಆಧಾರದ ಮೇಲೆ ಸರ್ಕಾರಕ್ಕೆ ಶಾಂತಿ ಮಾತುಕತೆ ಬಗ್ಗೆ ಆಸಕ್ತಿ ಇಲ್ಲ, ಬರಿಯ ಮಿಲಿಟರಿ ಮೇಲುಗೈ ಸಾಧಿಸುವುದರಲ್ಲಿ ಮಾತ್ರ ಆಸಕ್ತಿ ಎಂಬ ಎಲ್.ಟಿ.ಟಿ.ಇ. ಆಪಾದನೆ ಅರ್ಥಹೀನ.

ಈ ಕದನ ವಿರಾಮ ಉಲ್ಲಂಘನೆಯಿಂದ ಎಲ್.ಟಿ.ಟಿ.ಇ. ಮೂರನೇ ಬಾರಿ ಕದನ ಆರಂಭಿಸಿದಂತಾಗಿದೆ. 1983 ರಿಂದ 1989ರಲ್ಲಿ ಅಧ್ಯಕ್ಷ ಪ್ರೇಮದಾಸರೊಡನೆ ಶಾಂತಿ ಮಾತುಕತೆ ಆರಂಭಿಸಿದ್ದು ಮೊದಲ ಹಂತದ ಕದನ, ಎರಡನೇ ಹಂತದ ಕದನ ಜೂನ್ 1990 ರಿಂದ ಆರಂಭವಾಗಿ ಅಧ್ಯಕ್ಷೆ ಚಂದ್ರಿಕಾ ಸರ್ಕಾರ ಅಧಿಕಾರ ವಹಿಸಿಕೊಳ್ಳುವವರೆಗೆ.

ಎಲ್.ಟಿ.ಟಿ.ಇ. ಶ್ರೀಲಂಕಾದ ತಮಿಳರ ಒಂದು ಮುಖ್ಯ ಪ್ರತಿನಿಧಿ ನಿಜ. ಆದರೆ ಏಕಮಾತ್ರ ಪ್ರತಿನಿಧಿ ಅಲ್ಲ. ಶ್ರೀಲಂಕಾದ ತಮಿಳರು ಹಿಂದಿನ ಸರ್ಕಾರಗಳ ಜನಾಂಗದ್ವೇಷಿ ನೀತಿಯಿಂದ ಬೇಸತ್ತು ಎಲ್.ಟಿ.ಟಿ.ಇ.ಗೆ ದೊಡ್ಡ ಪ್ರಮಾಣದ ಬೆಂಬಲ ನೀಡಿದ್ದು ನಿಜ. ಆದರೆ ಈಗ ತಮಿಳರಿಗೆ ಗೌರವಪೂರ್ಣ ಶಾಂತಿ ಬೇಕು. ಅದಕ್ಕೆ ಎಲ್.ಟಿ.ಟಿ.ಇ. ಹೇಳುವಂತೆ ಪ್ರತ್ಯೇಕ ದೇಶವೊಂದೇ ಪರಿಹಾರವಲ್ಲ. ಶ್ರೀಲಂಕಾದ ಫೆಡರಲ್ ವ್ಯವಸ್ಥೆಯೊಳಗೆ ತಮಿಳು ಸ್ವಾಯತ್ತತೆ ಪರಿಹಾರವಾಗಬಲ್ಲದು. ಇಂತಹ ಪರಿಹಾರಕ್ಕೆ ತಮಿಳು ಹಾಗೂ ಸಿಂಹಳಿ ಜನಾಂಗಗಳ ಎರಡೂ ಕಡೆಯ ಜನ ಸಿದ್ಧವಿದ್ದಾರೆ. ಈ ಸಂದರ್ಭ ಎಲ್.ಟಿ.ಟಿ.ಇ.ನ ಹಠಮಾರಿತನ ಸಲ್ಲ. ಎಲ್.ಟಿ.ಟಿ.ಇ. ತನ್ನ ಹಠಮಾರಿತನ ಮುಂದುವರಿಸಿದರೆ ತಮಿಳರ ಬೆಂಬಲ, ಸಹಾನೂಭೂತಿ ಕಳೆದುಕೊಳ್ಳಬಹುದು. ಎಲ್.ಟಿ.ಟಿ.ಇ.ಗೆ ಇಷ್ಟವಿರಲಿ, ಇಲ್ಲದಿರಲಿ ಜನಾದೇಶದಂತೆ ನಾನು ಜನಾಂಗೀಯ-ಶಾಂತಿ ಸ್ಥಾಪಿಸಲು ಕಟಿಬದ್ಧ ಎಂದು ಅಧ್ಯಕ್ಷೆ ಚಂದ್ರಿಕಾ ಹೇಳಿದ್ದಾರೆ. ತಮಿಳರ ಸಮಸ್ಯೆಗಿಂತ ಶಾಂತಿ ಪುನಃ ಸ್ಥಾಪಿಸುವ ಎಲ್.ಟಿ.ಟಿ.ಇ. ಪಾತ್ರದ ಬಗೆಗಿನ ಪ್ರಶ್ನೆ ಯಾವ ರೂಪ ತಳೆಯಬಹುದು ಎಂಬ ಬಗ್ಗೆ ಎಲ್.ಟಿ.ಟಿ.ಇ. ಗೆ ಹೆಚ್ಚಿನ ಆತಂಕ ಇದ್ದಂತಿದೆ. ಈ ಹಠಮಾರಿತನಕ್ಕೆ ಸಲ್ಲದ ವರ್ತನೆಗೆ ಅದೇ ಕಾರಣವಿರಬಹುದು.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

15ನೇ ಮಹಾಧಿವೇಶನದ ನಿರ್ಣಯ

ಮೇ 9: ಫ್ಯಾಸಿಸಂ ವಿರುದ್ಧ ಮಹಾನ್ ವಿಜಯದ ಚಿನ್ನದ ಹಬ್ಬ ಆಚರಿಸಿ

ಫ್ಯಾಸಿಸಂ ಬಗ್ಗೆ ಜನರಲ್ಲಿ ಎಚ್ಚರ ಮೂಡಿಸುವುದು ಇಂದು ಪ್ರಮುಖ ಸಾಮ್ರಾಜ್ಯಶಾಹಿ ವಿರೋಧಿ ಕರ್ತವ್ಯ

1995ರ ಮೇ 9 ಯುರೋಪ್ ನಲ್ಲಿ ಫ್ಯಾಸಿಸಂ ವಿರುದ್ಧ ಮಹಾನ್ ವಿಜಯದ 50ನೇ ವಾರ್ಷಿಕೋತ್ಸವ. ಫ್ಯಾಸಿಸಂ ಸಾಮ್ರಾಜ್ಯವಾದದ ಅತ್ಯಂತ ಕೆಟ್ಟ ಹಾಗೂ ಕ್ರೂರ ರೂಪ. ಮಹಾನ್ ಕಮ್ಯುನಿಸ್ಟ್ ಬಲ್ಗೇರಿಯನ್ ನಾಯಕ ಕಾಮ್ರೇಡ್ ದಿಮಿಟ್ರೋವ್ ಫ್ಯಾಸಿಸಂನ್ನು ಗುತ್ತೇದಾರಿ ಬಂಡವಾಳದ ಪೂರ್ಣ ನಗ್ನವಾದ ಭಯೋತ್ಪಾದಕ ಸರ್ವಾಧಿಕಾರ ಎಂದು ಕರೆದಿದ್ದರು. ಫ್ಯಾಸಿಸಂನ ಜರ್ಮನ್ ಅವತಾರವಾಗಿದ್ದ ನಾಜಿಸಂ ಅತ್ಯಂತ ಕುಹಕದ್ದು ಹಾಗೂ ಸರ್ವನಾಶಕಾರಿಯಾಗಿತ್ತು.

1929ರಲ್ಲಿ ಇಡೀ ಬಂಡವಾಳಶಾಹಿ ಜಗತ್ತಿನಲ್ಲಿ ಆರ್ಥಿಕ ಕುಸಿತದ ಹಿನ್ನೆಲೆಯಲ್ಲಿ, ಜರ್ಮನಿ ಅತ್ಯಂತ ಹೆಚ್ಚು ದುಷ್ಪರಿಣಾಮಕ್ಕೊಳಗಾದ ದೇಶವಾಗಿತ್ತು. ಕಾರ್ಖಾನೆಗಳು, ಕಚೇರಿಗಳು, ಸಾವಿರಾರು ಸಂಖ್ಯೆಯಲ್ಲಿ ಮುಚ್ಚಲ್ಪಟ್ಟವು. ಲಕ್ಷಾಂತರ ನಿರುದ್ಯೋಗಿಗಳು ಜರ್ಮನ್ ಬೀದಿಗಳಲ್ಲಿ ಅಲೆಯಲಾರಂಭಿಸಿದ್ದರು. ಇಂತಹ ಪರಿಸ್ಥಿತಿಯಲ್ಲಿ ಜರ್ಮನ್ ಸಮಾಜಕ್ಕೆ ಪ್ರಗತಿಪರ ಬದಲಾವಣೆಯತ್ತ ತಿರುವು ಕೊಡಲು ಜರ್ಮನ್ ಕಮ್ಯುನಿಸ್ಟರು ಹೋರಾಡುತ್ತಿದ್ದರು. ಇದೇ ಸಂದರ್ಭದಲ್ಲಿ ನಾಜೀ ಪಕ್ಷದ ನಾಯಕತ್ವದಲ್ಲಿ ಫ್ಯಾಸಿಸ್ಟರು ಅಧಿಕಾರ ಕಸಿದುಕೊಂಡು ಜರ್ಮನಿಯನ್ನು ಫ್ಯಾಸಿಸ್ಟ್ ಶಕ್ತಿಯಾಗಿ ಬೆಳೆಸಲು ತೀವ್ರ ಪ್ರಯತ್ನ ನಡೆಸಿದ್ದರು. ಈ ಪ್ರಯತ್ನದಲ್ಲಿ ಜರ್ಮನಿಯ ಕ್ರುಪ್ಸ್, ಥೈಸೆನ್, ಸೀಮನ್ ಇತ್ಯಾದಿ ಗುತ್ತೇದಾರಿ ಬಂಡವಾಳಿಗರು ಫ್ಯಾಸಿಸ್ಟರ ಈ ಪ್ರಯತ್ನಗಳಿಗೆ ಕುಮ್ಮಕ್ಕು ಕೊಡುತ್ತಾ ಆರ್ಥಿಕ ನೆರವು ನೀಡುತ್ತಿದ್ದರು. ಆಂಗ್ಲೋ-ಫ್ರೆಂಚ್ ಸಾಮ್ರಾಜ್ಯಶಾಹಿ ಸಹ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಅಧಿಕಾರಕ್ಕೆ ಬರದಂತೆ ತಡೆಗಟ್ಟಿ ನಾಜಿಗಳು ಗೆಲ್ಲುವಂತೆ ಎಲ್ಲಾ ಪ್ರಯತ್ನಗಳನ್ನು ಮಾಡಿತ್ತು.

1934ರಲ್ಲಿ ಕೊನೆಗೂ ಹಿಟ್ಲರ್ ಜರ್ಮನಿಯಲ್ಲಿ ಅಧಿಕಾರ ಕಸಿದುಕೊಂಡಾಗ ಮೊದಲ ಅಪಾಯದ ಗಂಟೆ ಬಾರಸಿದ್ದು 7ನೇ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಮಹಾಧಿವೇಶನ. ಅಲ್ಲಿ ಮಾತನಾಡುತ್ತಾ ಕಾಮ್ರೇಡ್ ಜಾರ್ಜಿ ದಿಮಿಟ್ರೋವ್ ಫ್ಯಾಸಿಸಂನ್ನು ವಿರೋಧಿಸುವ ಎಲ್ಲಾ ಶಕ್ತಿಗಳು ಒಂದಾಗಿ ನಾಜಿಗಳ ವಿರುದ್ಧ ಹೋರಾಡಬೇಕು. ಯುರೋಪಿನ ಇತರ ದೇಶಗಳಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರ ಕಸಿದುಕೊಳ್ಳುವುದನ್ನು ತಡೆಯಬೇಕು ಎಂದು ಕರೆ ಕೊಟ್ಟರು. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ ಕರೆಯ ಮೇರೆಗೆ ಫ್ಯಾಸಿಸಂ ವಿರುದ್ಧವಾಗೂ ವಿಶ್ವಶಾಂತಿಯ ಪ್ರಮುಖ ಕೋಟೆಯಂತಿದ್ದ ಸೋವಿಯೆತ್ ಒಕ್ಕೂಟ ಪದೇ ಪದೇ ಆಂಗ್ಲೋ-ಫ್ರೆಂಚ್ ಶಕ್ತಿಗಳಿಗೆ ಸಾಮೂಹಿಕ ಭದ್ರತಾ ಒಪ್ಪಂದಕ್ಕೆ ಬರಲು ಮನವಿ ಮಾಡಿತು. ಈ ಸಾಮೂಹಿಕ ಭದ್ರತಾ ಒಪ್ಪಂದ ಮಾಡಿಕೊಂಡರೆ ಯಾವುದೇ ದೇಶದ ಮೇಲೆ ಜರ್ಮನಿಯ ಆಕ್ರಮಣ ಮಾಡಿದಾಗ ಇತರ ದೇಶಗಳು (ಫ್ರಾನ್ಸ್ ಬ್ರಿಟನ್ ಹಾಗೂ ಸೋವಿಯೆತ್ ಒಕ್ಕೂಟ) ಅದರ ನೆರವಿಗೆ ಬರಬೇಕು. ಅಗತ್ಯಬಿದ್ದರೆ ಸಶಸ್ತ್ರವಾಗಿ ಮಧ್ಯಪ್ರವೇಶ ಮಾಡಬೇಕು. ಆದರೆ ಸೋವಿಯೆತ್ ಒಕ್ಕೂಟದ ಎಲ್ಲಾ ಮನವಿಗಳು ವ್ಯರ್ಥವಾದವು. ಅಮೇರಿಕನ್ ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನ ಮೇಲೆ ಆಂಗ್ಲೋ-ಫ್ರೆಂಚ್ ಸಾಮ್ರಾಜ್ಯಶಾಹಿ ಹಿಟ್ಲರ್‌ನನ್ನು ಬಲಪಡಿಸಿ, ಆತನ ಬಲಪ್ರಯೋಗ ಸೋವಿಯೆತ್ ಒಕ್ಕೂಟದ ಮೇಲೆ ಆಗುವಂತೆ ಮಾಡಿ ಅದನ್ನು ನಿರ್ನಾಮ ಮಾಡುವ ದುರುದ್ದೇಶದ ಬಗ್ಗೆ ಗಟ್ಟಿ ನಿರ್ಧಾರ ಕೈಗೊಂಡಿದ್ದವು. ರೈನ್ ಲ್ಯಾಂಡ್, ಆಸ್ಟ್ರಿಯಾ ಮತ್ತು ಚೆಕೊಸ್ಲೋವಾಕಿಯಾ ಒಂದೊಂದಾಗಿ ಹಿಟ್ಲರ್‌ನ ಬೂಟುಗಳಡಿಯಲ್ಲಿ ತತ್ತರಿಸಲಾರಂಭಿಸಿದಾಗ, ಈ ಎಲ್ಲಾ ದೇಶಗಳನ್ನು ಹಿಟ್ಲರ್ ಕಬಳಿಸುತ್ತಿದ್ದಾಗ ಆಂಗ್ಲೋ-ಫ್ರೆಂಚ್ ಸಾಮ್ರಾಜ್ಯಶಾಹಿಗಳು ತಮ್ಮ ಕಿರು ಬೆರಳನ್ನೆತ್ತಲಿಲ್ಲ ಎಂದು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯ.

ಸಾಮೂಹಿಕ ಭದ್ರತಾ ಒಪ್ಪಂದದ ಪ್ರಸ್ತಾಪವನ್ನು ಸೋವಿಯೆತ್ ಒಕ್ಕೂಟ ಪದೇ ಪದೇ ಮಾಡುತ್ತಾ ಹೋದರೂ ಆಂಗ್ಲೋ-ಫ್ರೆಂಚ್ ಸಾಮ್ರಾಜ್ಯಶಾಹಿಗಳು ಅದನ್ನು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಮಾತ್ರವಲ್ಲ ಹಿಟ್ಲರ್‌ನಿಗೆ ಕುಮ್ಮಕ್ಕು ಕೊಡುತ್ತಾ ಹೋದವು. ಇದರ ಪರಿಣಾಮವಾಗಿ ಕೊನೆಗೆ ಸೋವಿಯೆತ್ ಒಕ್ಕೂಟ ಬಿಟ್ಟರೆ ಇಡೀ ಯುರೋಪು ಖಂಡ (ಬ್ರಿಟಿಷ್ ದ್ವೀಪಗಳನ್ನು ಬಿಟ್ಟು) ಹಿಟ್ಲರ್ ನ ಕೈಕೆಳಗೆ ಬಂತು. 1941ರ ಜೂನ್ 22 ರಂದು ಹಿಟ್ಲರ್ ಸೋವಿಯೆತ್ ಒಕ್ಕೂಟದ ಮೇಲೆ ಆಕ್ರಮಣ ಮಾಡಿದ. ಜಗತ್ತಿನ ಪ್ರಥಮ ಸಮಾಜವಾದಿ ದೇಶವಾದ ಸೋವಿಯೆತ್ ಒಕ್ಕೂಟದ ಜನತೆ ಹಿಟ್ಲರ್ ಗ್ಯಾಂಗ್ ನ್ನು ಎದುರಿಸಲು ಮುನ್ನುಗ್ಗಿತ್ತು. ಜರ್ಮನ್ ಅಡಿಯಾಳಾಗಿದ್ದ ಯುರೋಪಿನಲ್ಲಿ ಸಹ ಕಮ್ಯುನಿಸ್ಟರು ಹಾಗೂ ಇತರ ದೇಶಪ್ರೇಮೀ ಶಕ್ತಿಗಳು, ಜರ್ಮನ್ ಫ್ಯಾಸಿಸ್ಟ್ ಸೈನ್ಯದ ವಿರುದ್ಧ ಅವಿರತ ಗೆರಿಲ್ಲಾ ಹೋರಾಟ ನಡೆಸಿದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯ.

1945ರ ಮೇ 9 ರಂದು ಜರ್ಮನ್ ಯುದ್ಧಯಂತ್ರ ಮಿತ್ರ ಪಕ್ಷ ಹಾಗೂ ಸೋವಿಯೆತ್ ಸೈನ್ಯದ ನಾಯಕರ ಎದುರು ಶರಣಾಯಿತು ನಿಜ. ಆದರೆ ಜರ್ಮನ್ ಪತನದ ನಾಂದಿ ಹಿಡಿದಿದ್ದು ಹೆಚ್ಚು ಕಡಿಮೆ ನಿರ್ನಾಮವಾದ ಸೋವಿಯೆತ್ ನಗರ ಸ್ಟಾಲಿನ್ ಗ್ರಾಡ್, 1943ರ ಜನವರಿ-ಫೆಬ್ರವರಿಯಲ್ಲಿ ಎನ್ನುವುದು ಹೆಚ್ಚು ಸರಿಯಾದೀತು. 1943ರಿಂದ 1945ರವರೆಗೆ ಹಿಟ್ಲರ್‌ನ ಗ್ಯಾಂಗ್‌ಗಳನ್ನು ಎದುರಿಸಿ ಸದೆಬಡಿದದ್ದು ಸೋವಿಯೆತ್ ಕೆಂಪು ಸೈನ್ಯದ ಅವಿರತ ಪ್ರತಿಧಾಳಿ. ಮಹಾಯುದ್ಧ ಮುಗಿದ ನಂತರವೇ ಫ್ಯಾಸಿಸ್ಟರು ಹರಿಬಿಟ್ಟ ವಿನಾಶ, ಕ್ರೌರ್ಯದ ಅರಿವು ಜಗತ್ತಿಗೆ ಆಗಿದ್ದು. ಹಿಟ್ಲರ್ ನಡೆಸಿದ ಆಶ್‌ವಿಟ್ಜ್, ಬಿಕರನೌ, ಟ್ರೆಬ್ಲಿಂಕಾ ಮತ್ತು ಇನ್ನೂ ಹಲವಾರು ಫ್ಯಾಸಿಸ್ಟ್ ಕ್ಯಾಂಪ್‌ಗಳು ಅವರ ಬರ್ಬರತೆಯ ನಿದರ್ಶನಗಳಾಗಿ ಜನಮಾನಸದ ಎದುರಿಗೆ ಬಂತು. ಅರವತ್ತು ಲಕ್ಷದಷ್ಟು ಜೂಗಳು, ಕಮ್ಯುನಿಸ್ಟರು, ಜಿಪ್ಸಿಗಳು ಹಾಗೂ ಇತರ ಪ್ರಜಾಪ್ರಭುತ್ವವಾದಿಗಳನ್ನು ಚಿತ್ರಹಿಂಸೆಯ ನಂತರ ಗ್ಯಾಸ್‌ಲಾಸ್ ಚೆಂಬರ್‌ಗಳಲ್ಲಿ ಉಸಿರುಗಟ್ಟಿಸಿ ಕೊಲ್ಲಲಾಯಿತು. ಅವರು ಅದಕ್ಕಾಗಿಯೇ ವಿಶೇಷವಾಗಿ ಕಟ್ಟಿಸಿದ ವಿಶೇಷ ಚಿತಾಗಾರಗಳಲ್ಲಿ ಸುಟ್ಟು ಹೊಗೆಯಾಗಿ ಚಿಮಣಿಗಳ ಮೂಲಕ ಆಕಾಶ ಸೇರಿದರು. ಸಾವಿರಾರು ಕೋಟಿಗಳ ಡಾಲರುಗಳಷ್ಟು ಆಸ್ತಿಪಾಸ್ತಿ ನಾಶವಾಯಿತು. ಸೋವಿಯೆತ್ ಒಕ್ಕೂಟದ ದೊಡ್ಡಭಾಗದ ಜಮೀನು ಜರ್ಜರಿತವಾಯಿತು. ಫ್ಯಾಸಿಸಂನ ಬರ್ಬರ ರೂಪ ಇದಾಗಿತ್ತು.

ಸಮಾಜವಾದದ ಮಾನವೀಯತೆಯ ಪ್ರತೀಕ



ಮೇ 8-9, 1945ರ ನಡುರಾತ್ರಿ. ಅಮಾನುಷ ಅತ್ಯಾಚಾರಗಳಿಂದ ಇಡೀ ಮಾನವ ಕುಲಕ್ಕೆ ಕಳಂಕವಾಗಿದ್ದ ಹಿಟ್ಲರ್ ಶಾಹೀ ಸೇನೆ ಜರ್ಮನಿಯ ಬರ್ಲಿನ್‌ನಲ್ಲಿ ಸೋವಿಯೆತ್ ಕೆಂಪು ಸೇನೆಗೆ ಶರಣಾಯಿತು. ಇಡೀ ಪೂರ್ವ ಯುರೋಪನ್ನು ಹಿಟ್ಲರ್‌ಶಾಹಿಯ ಅಮಾನುಷ ಅತ್ಯಾಚಾರಗಳಿಂದ ರಕ್ಷಿಸಿದ ಸೋವಿಯೆತ್ ಸೇನೆಯ ಮಾನವೀಯತೆಯನ್ನು ಎತ್ತಿ ತೋರುವ ಬರ್ಲಿನ್‌ನ ಟ್ರೆಪ್ಟೋರ್ ಪಾರ್ಕ್‌ನಲ್ಲಿರುವ ಸೋವಿಯೆತ್ ಸೈನಿಕರಿಗೆ ಕಟ್ಟಿದ ಸ್ಮಾರಕ ಇದು. ಒಂದು ಕೈಯಲ್ಲಿ ಹಿಟ್ಲರ್ ಶಾಹಿಯನ್ನು ಮೆಟ್ಟಿ ಹಾಕಿದ ಖಡ್ಗ ಮತ್ತೊಂದು ಕೈಯಲ್ಲಿ ರಕ್ಷಿಸಿದ ಮಗು.

ನಾಜಿಸಂನ್ನು ಯುರೋಪಿನಲ್ಲಿ ನಾಶಗೊಳಿಸಲಾಯಿತು ನಿಜ. ಆದರೆ ಸಾಮ್ರಾಜ್ಯವಾದದ ಕ್ರೂರರೂಪವಾಗಿ ಫ್ಯಾಸಿಸಂ ಎಂದೂ ಮತ್ತೆ ತಲೆಎತ್ತಲಾರದು ಎಂದು ತಿಳಿಯುವುದು ದೊಡ್ಡ ತಪ್ಪಾದೀತು. ಈಗಾಗಲೇ ನವನಾಜಿ ಗುಂಪುಗಳು ಜರ್ಮನಿಯಲ್ಲಿ ಮಾತ್ರವಲ್ಲ ಯುರೋಪಿನ ಹಲವು ದೇಶಗಳಲ್ಲಿ ತಲೆಎತ್ತುತ್ತಿರಲು ಲಕ್ಷಣ ಕಂಡು ಬಂದಿದೆ. ಆದ್ದರಿಂದ ಫ್ಯಾಸಿಸಂ ಮಾನವತೆ ವಿರುದ್ಧ ಎಸಗಿದ ಘೋರ ಅಪರಾಧಗಳನ್ನು ಜನತೆಗೆ ನೆನಪಿಸದೆ ಇರುವುದು ಅಕ್ಷಮ್ಯ ಅಪರಾಧವಾದೀತು. ಫ್ಯಾಸಿಸಂ ಎಂಬ ಘೋರ ಪೀಡೆ ಬಗ್ಗೆ ಜನರಿಗೆ ಪದೇ ಪದೇ ನೆನಪಿಸುವುದು ಅಗತ್ಯ.

ಸಿಪಿಐ(ಎಂ)ನ 15ನೇ ಮಹಾಧಿವೇಶನ ತನ್ನ ಎಲ್ಲಾ ಘಟಕಗಳಿಗೆ, ಕಾರ್ಯಕರ್ತರಿಗೆ ಹಾಗೂ ಹಿತೈಷಿಗಳಿಗೆ ಜನರ ಬಳಿಗೆ ಹೋಗಿ ಫ್ಯಾಸಿಸಂನ ನಿಜವಾದ ಹುಟ್ಟು ಹಾಗೂ ರೂಪದ ಬಗ್ಗೆ ಎಚ್ಚರ ಮೂಡಿಸಬೇಕೆಂದು ಕರೆ ನೀಡುತ್ತದೆ. ಫ್ಯಾಸಿಸಂ ಬಗ್ಗೆ ಜನತೆಯಲ್ಲಿ ಸರಿಯಾದ ಎಚ್ಚರ ಮೂಡಿಸುವುದು ಇಂದಿನ ಪ್ರಮುಖ ಸಾಮ್ರಾಜ್ಯಶಾಹಿ ವಿರೋಧಿ ಕರ್ತವ್ಯ.

ಮೇ 9 ರಂದು ದೇಶಾದಾದ್ಯಂತ ಪಕ್ಷದ ಘಟಕಗಳು ಸಭೆ, ಸೆಮಿನಾರುಗಳು, ಚರ್ಚೆಗಳನ್ನು ಏರ್ಪಡಿಸಿ ಜನರಲ್ಲಿ ಫ್ಯಾಸಿಸಂ ಬಗ್ಗೆ ಎಚ್ಚರ ಮೂಡಿಸಬೇಕು. ಅವುಗಳ ಮೂಲಕ ಫ್ಯಾಸಿಸಂನ ಸ್ವರೂಪ, ಹಾಗೂ 1945ರಲ್ಲಿ ಫ್ಯಾಸಿಸಂ ಗೆ ಸೋಲಾಗಿದ್ದರೂ ಅದರ ಪೂರ್ಣ ವಿನಾಶವಾಗಿಲ್ಲ ಎಂಬ ಬಗ್ಗೆ ಜವರ ಗಮನ ಸೆಳೆಯಬೇಕು. ಫ್ಯಾಸಿಸ್ಟ್ ಶಕ್ತಿಗಳು ಇಡೀ ಜಗತ್ತಿನಲ್ಲಿ ಪುನಃ ತಲೆಎತ್ತುತ್ತಿವೆ. ಜನರಿಗೆ ಅದರ ಅಪಾಯದ ಬಗ್ಗೆ ತಿಳಿ ಹೇಳಿ ಎಚ್ಚರ ಮೂಡಿಸಬೇಕು.